ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 24
೧೩ ಏಪ್ರಿಲ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಭಾರತ ಕಮ್ಯೂನಿಸ್ಟ್ ಪಾರ್ಟಿ ವಿಶೇಷ ಅಧಿವೇಶನ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ವಿಶೇಷ ಅಧಿವೇಶನವು ಅಮೃತಸರದಲ್ಲಿ ವಿಶೇಷವಾಗಿ ನಿರ್ಮಿತವಾಗಿರುವ ರತ್ನಸಿಂಗ್ ನಗರದಲ್ಲಿ ಏಪ್ರಿಲ್ 6ರಂದು ಆರಂಭವಾಯಿತು. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಚಿರಸ್ಥಾಯಿಯಾಗಿರುವ ಜಲಿಯನ್‌ವಾಲಾಬಾಗ್—1919ರಲ್ಲಿ ನೂರಾರು ಭಾರತೀಯರು ಬ್ರಿಟಿಷರ ದಬ್ಬಾಳಿಕೆಯ ಅಸ್ತ್ರ ಗೋಲಿಬಾರಿಗೆ ಬಲಿಯಾದ ಸ್ಥಳ—ಇರುವ ಅಮೃತಸರದಲ್ಲಿ ಈ ಅಧಿವೇಶನ ಜರಗುತ್ತಿದೆ.

ಸಮ್ಮೇಳನದ ಉದ್ಘಾಟನೆಗೆ ಮುಂಚೆ ಭಾರತದ ನಾನಾ ಭಾಗಗಳಿಂದ ಆಗಮಿಸಿರುವ ಸುಮಾರು ಏಳುನೂರು ಮಂದಿ ಪ್ರತಿನಿಧಿಗಳು ಮೆರವಣಿಗೆಯಲ್ಲಿ ಜಲಿಯನ್‌ವಾಲಾ ಬಾಗ್‌ಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಲು ಆಗಮಿಸಿದರು. ಪಾರ್ಟಿಯ ನಾಯಕರು ಮತ್ತಿತರರು ಹುತಾತ್ಮರ ಸ್ಮಾರಕದ ಬಳಿ ಪುಷ್ಪವನ್ನರ್ಪಿಸಿದರು. ಇದು ಬಂದಿದ್ದ ಪ್ರತಿನಿಧಿಗಳೆಲ್ಲರಿಗೂ, 30 ವರ್ಷದ ಹಿಂದೆ ಜನರಲ್ ಡೇಸ್ ನಡೆಸಿದ ಕಗ್ಗೊಲೆಯನ್ನು ನೆನಪಿಗೆ ತಂದಿದೆ. ಅಲ್ಲಿನ ಗೋಡೆಗಳ ಮೇಲಿದ್ದ ಗುಂಡಿನ ಗುರುತುಗಳು ಸಾಮ್ರಾಜ್ಯಶಾಹಿ ಕ್ರೂರದಬ್ಬಾಳಿಕೆಯನ್ನು ನೆನಪಿಗೆ ತರುತ್ತಿತ್ತು.

ನಂತರ ಕೇಂದ್ರ ಸರಕಾರದ ವಿದ್ಯಾ ಸಚಿವರಾಗಿದ್ದ ಮೌಲಾನ ಅಬುಲ್ ಕಲಾಂ ಅಜಾದ್ ಮತ್ತು ಕೇರಳದ ಮಹಾ ಕವಿ ವಲ್ಲತ್ತೋಳ್‌ರವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯಗಳನ್ನು ಎರಡು ನಿಮಿಷ ಮೌನ ಆಚರಿಸಿ, ಅಧಿವೇಶನವು ಅಂಗೀಕರಿಸಿತು. ಇನ್ನೊಂದು ನಿರ್ಣಯದಲ್ಲಿ ಅಧಿವೇಶನವು ಫ್ರೆಂಚ್ ಕಮ್ಯೂನಿಸ್ಟ್ ಪಕ್ಷದ ಮಾರ್ಸೆಲ್ ಕ್ಯಾಚಿನ್‌ರವರ

ತಿನಿಧಿಗಳೂ; ಫ್ರೆಂಚ್ ಕಮ್ಯೂನಿಸ್ಟ್ ಪಕ್ಷದ ಮುಖ ಪತ್ರ "ಲಾಉಮಾನಿತೆ"ಯ ಪತ್ರಕರ್ತರೂ ಅಧಿವೇಶನಕ್ಕೆ ಆಗಮಿಸಿದ್ದಾರೆ.


ಅಧ್ಯಕ್ಷ ಮಂಡಲಿ

ಅಧಿವೇಶನದ ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಹೋಗಲು ಪ್ರತಿನಿಧಿಗಳು ಅಧ್ಯಕ್ಷ ಮಂಡಲಿಯೊಂದನ್ನು ಚುನಾಯಿಸಿದರು. ಅಧ್ಯಕ್ಷ ಮಂಡಲದಲ್ಲಿ

ನಿಧಿಗಳ ಊಟ ಉಪಚಾರಗಳ ವ್ಯವಸ್ಥೆಗೆ ಪಂಜಾಬ್ ಕಮ್ಯೂನಿಸ್ಟ್ ಪಕ್ಷವು ಪರಿಪಕ್ವವಾದ ಏರ್ಪಾಟು ಮಾಡಿದೆ.

ಕಾರ್ಯಕಲಾಪಗಳು

ಅಧಿವೇಶನದ ಕಾರ್ಯಕಲಾಪಗಳು ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ| ಅಜಯ ಘೋಷ್‌ರ ವರದಿಯಿಂದ ಆರಂಭವಾಯಿತು. ಕಾಮ್ರೇಡ್ ಘೋಷ್‌ರವರು ತಮ್ಮ ವರದಿಯಲ್ಲಿ ವಿಶ್ವದಾದ್ಯಂತ ಮಾರ್ಕ್ಸ್‌ವಾದೀ ಚಳವಳಿಯಲ್ಲಿ ಆಗಿರುವ ಬೆಳವಣಿಗೆಯನ್ನು ವಿವರಿಸಿದರು. ಕಳೆದ ಅಕ್ಟೋಬರ್ ತಿಂಗಳಲ್ಲಿ ಮಾಸ್ಕೋದಲ್ಲಿ ಅಕ್ಟೋಬರ್ ಕ್ರಾಂತಿಯ 40ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಮಾಡಿರುವ ಘೋಷಣೆಯ ಮಹತ್ವವನ್ನು ಅವರು ವಿವರಿಸಿದರು. ವಿಶ್ವದಲ್ಲಿ ಇಂದು ಸಮಾಜವಾದೀ ಶಕ್ತಿಗಳು ಹೆಚ್ಚು ಹೆಚ್ಚು ಬಲಗೊಳ್ಳುತ್ತಿರುವ ಅಂಶವನ್ನು ಸಾಮ್ರಾಜ್ಯಶಾಹಿಯು ಬಲಗುಂದುತ್ತಿರುವ ಅಂಶವನ್ನು ಅವರು ಒತ್ತಿ ಹೇಳಿದರು. ಹಿಂದೆ ವಸಾಹತುಗಳಾಗಿದ್ದ ರಾಜ್ಯಗಳು ಇಂದು ಸ್ವತಂತ್ರವಾಗಿರುವುದು ಸಾಮ್ರಾಜ್ಯಶಾಹಿಗಳಿಗೆ ಹೊಸ ಆತಂಕವಾಗಿದೆ. ಈ ಸಂದರ್ಭದಲ್ಲಿ ಅವರು, ಸಮಾಜವಾದೀ ಶಕ್ತಿಯ ಬಲವು ವರ್ಧಿಸುತ್ತಿರುವ ದೃ



ಏಪ್ರಿಲ್ ೬ರಂದು ಜಲಿಯನ್‌ವಾಲ ಬಾಗ್‌ನಲ್ಲಿ ಹುತಾತ್ಮರ ಸ್ಮಾರಕದ ಬಳಿ ಕಾಂ| ಇ. ಎಂ. ಎಸ್. ನಂಬೂದ್ರಿಪಾದ್ ಪುಷ್ಪವನ್ನರ್ಪಿಸುತ್ತಿರುವುದು.
—ಫೋಟೋ: ಪ್ರಭಾತ್ ಸ್ಟುಡಿಯೋ, ಅಮೃತಸರ.

ಇತಿಹಾಸ ಪ್ರಸಿದ್ಧವಾದ ಅಮೃತಸರದಲ್ಲಿ ಆರಂಭ

ಅಧಿವೇಶನ ಆರಂಭಕ್ಕೆ ಮುಂಚೆ, ಕಾಂ|| ಪಿ. ಸುಂದರಯ್ಯರವರು ಪ್ರತಿನಿಧಿಗಳು ಬಿಡಾರ ಮಾಡಿಕೊಂಡಿರುವ ಗೋಲ್ ಬಾಗ್‌ನಲ್ಲಿ ಕೆಂಪು ಧ್ವಜಾರೋಹಣ ಮಾಡಿದರು. ಧ್ವಜಾರೋಹಣ ಸಮಾರಂಭದಲ್ಲಿ ಮಾತನಾಡುತ್ತ ಅವರು ಕೆಂಪು ಬಾವುಟದ ಇತಿಹಾಸವನ್ನು ಅದರ ಮಹತ್ವವನ್ನು ವಿವರಿಸಿದರು.

ಪ್ರತಿನಿಧಿಗಳ ಅಧಿವೇಶನವು ಸುಂದರವಾಗಿ ಅಲಂಕೃತವಾಗಿದ್ದ ಭವನದಲ್ಲಿ ಮಧ್ಯಾಹ್ನ ಎರಡು ಘಂಟೆಗೆ ಅಂತರ ರಾಷ್ಟ್ರೀಯ ಗೀತೆ ಮತ್ತು ಜನಗಣಮನ ರಾಷ್ಟ್ರೀಯ ಗೀತೆಯೊಂದಿಗೆ ಆರಂಭವಾಯಿತು.

ಹುತಾತ್ಮರಿಗೆ ಶ್ರದ್ಧಾಂಜಲಿ

ಜನತೆಯ ಸೇವೆಯಲ್ಲಿ, ಹೋರಾಟದಲ್ಲಿ ಪೋಲೀಸರ ಗುಂಡಿಗೆ ಬಲಿಯಾಗಿರುವ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಅಧಿವೇಶನವು ಎರಡು ನಿಮಿಷ ಮೌನ ಆಚರಿಸಿ ಅನುಮೋದಿಸಿತು.

ನಿಧನದ ಬಗ್ಗೆ ಸಂತಾಪವನ್ನು ಸೂಚಿಸಿತು.

ಶುಭಾಶಯಗಳು

ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನವು ಎಲ್ಲ ರೀತಿಯಲ್ಲಿಯೂ ಯಶಸ್ವಿಯಾಗಲೆಂದು ಹಾರೈಸುವ ಶುಭಾಶಯಗಳು ಸೋವಿಯತ್ ಯೂನಿಯನ್, ಚೀಣಾ, ಪೋಲೆಂಡ್ ಜಿಕೋಸ್ಲೋವೇಕಿಯಾ, ವಿಯತ್ನಾಂ, ಕೊರಿಯ, ನಾರ್ವೆ, ಫ್ರೆಂಚ್, ಇಂಡೊನೇಷಿಯ, ಅಮೇರಿಕ, ಜಪಾನ್ ಕಮ್ಯೂನಿಸ್ಟ್ ಪಕ್ಷಗಳಿಂದ ಬಂದಿದ್ದುವು. ಅಧಿವೇಶನದಲ್ಲಿ ಭಾಗವಹಿಸಲು ಇಂಡೋನೇಷಿಯ, ಫ್ರೆಂಚ್ ಮೊದಲಾದ ಅನೇಕ ಕಮ್ಯೂನಿಸ್ಟ್ ಪಕ್ಷಗಳಿಂದ ಸೌಹಾರ್ದ ಪ್ರತಿನಿಧಿಗಳು ಬರುವ ನಿರೀಕ್ಷೆಯಿದ್ದಿತು. ಆದರೆ ಭಾರತ ಸರಕಾರವು ರಹದಾರಿಯನ್ನು ಕೊಡದಿದ್ದುದರಿಂದ ಬರಲಾಗಲಿಲ್ಲ. ನೇಪಾಳ ಮತ್ತು ಸಿಲೋನಿನ ಕಮ್ಯೂನಿಸ್ಟ್ ಪಕ್ಷದಿಂದ ಸೌಹಾರ್ದ ಪ್ರ

ಕಾಮ್ರೇಡ್‌ಗಳಾದ ಎಸ್. ಎ. ಡಾಂಗೆ, ಸೋಹನ್ ಸಿಂಗ್ ಜೋಷ್, ಇ. ಎಂ. ಎಸ್. ನಂಬೂದ್ರಿಪಾದ್, ಟಿ. ನಾಗಿರೆಡ್ಡಿ, ಅಬ್ದುಲ್ ಹಾಲಿಮ್, ಗೋದಾವರಿ ಪರುಳೇಕರ್ ಮತ್ತು ಜ್ಯೋತಿ ಬಸುರವರು ಇದ್ದಾರೆ.

ಅಧಿವೇಶನದ ಸ್ಟೀಯರಿಂಗ್ ಕಮಿಟಿಯಲ್ಲಿ ಕಾಂ| ಪಿ. ಸಿ. ಜೋಷಿ, ಬಿ. ಟಿ. ರಣದಿವೆ, ಅಜಯ ಕುಮಾರ್ ಘೋಷ್ ಮೊದಲಾದವರು ಇದ್ದಾರೆ.

ಅಧಿವೇಶನದ ಉದ್ಘಾಟನೆಯನ್ನು ಕ್ರಾಂತಿಕಾರೀ ನಾಯಕರಾದ ಸೋಹನ್ ಸಿಂಗ್ ಭಾಕ್ನಾರವರು ನೆರವೇರಿಸಿದರು.

ಪ್ರತಿನಿಧಿಗಳು ಪಂಜಾಬ್‌ನ ಕಮ್ಯೂನಿಸ್ಟ್ ನಾಯಕರೂ 1923ರಲ್ಲಿ ಕಮ್ಯೂನಿಸ್ಟ್ ಅಂತರರಾಷ್ಟ್ರೀಯ ಅಧಿವೇಶದಲ್ಲಿ ಭಾಗವಹಿಸಿದವರೂ ಆಗಿದ್ದ ಕಾಂ| ರತನ್ ಸಿಂಗ್‌ರವರ ಹೆಸರಿನಲ್ಲಿ ನಿರ್ಮಿತವಾಗಿರುವ ನಗರದಲ್ಲಿ ಇಳಿದುಕೊಂಡಿದ್ದಾರೆ. ಪ್ರತಿ

ಷ್ಟಿಯಲ್ಲಿ ಶಾಂತಿಯುತವಾದ ಮಾರ್ಗದಲ್ಲಿ ಸಮಾಜವಾದವನ್ನು ಸಾಧಿಸಲು ಇರುವ ಹೊಸ ಸಾಧ್ಯತೆಗಳನ್ನು ಕುರಿತು ವಿವರಿಸಿದರು.

ಕರಡು ಘಟನೆಯ ಮಂಡನೆ

ಅಧಿವೇಶನದ ಮುಖ್ಯ ಕಾರ್ಯವು ಪಾರ್ಟಿಯ ಕರಡು ಘಟನೆಯನ್ನು ಅನುಮೋದಿಸುವುದಾಗಿದೆ. ಕಾಂ|| ಅಧಿಕಾರಿಯವರು ಕರಡು ಘಟನೆಯನ್ನು ಮಂಡಿಸುತ್ತ, ಪಾರ್ಟಿ ಸಂಘಟನೆಯ ಪ್ರಶ್ನೆಯ ಬಗ್ಗೆ ನಿರ್ದಿಷ್ಟವಾದ ದೃಷ್ಟಿಯನ್ನಿಟ್ಟುಕೊಳ್ಳುವುದರ ಅಗತ್ಯತೆಯನ್ನು ಒತ್ತಿ ಹೇಳಿದರು. ಪಾರ್ಟಿಯು ರಾಷ್ಟ್ರೀಯ ರಾಜಕೀಯ ಶಕ್ತಿಯಾಗಿ ಇಂದು ತನ್ನ ಕಾರ್ಯವನ್ನು ನಿರ್ವಹಿಸಬೇಕಿದ್ದಲ್ಲಿ, ಸಾಮೂಹಿಕವಾದ, ಬಲವಾದ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟುವುದರ ಅಗತ್ಯತೆಯನ್ನು ವಿವರಿಸಿದರು.

ಅಧಿವೇಶನವು ಘಟನೆಯ ಬಗ್ಗೆ ಚರ್ಚೆ

(ಕೊನೇ ಪುಟ ನೋಡಿ)

ಸರಕಾರ ಮತ್ತು ಜನತೆ—ಒಂದು ಹೊಸ ದೃಷ್ಟಿ

[ಕೇರಳ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಸಿ. ಉನ್ನಿರಾಜರವರು ಕೇರಳ ಕಮ್ಯೂನಿಸ್ಟ್ ಸರಕಾರದ ಒಂದು ವರ್ಷದ ಆಡಳಿತೆಯ ಬಗ್ಗೆ ಬರೆದಿರುವ ವಿಶೇಷ ಲೇಖನವನ್ನು ಪ್ರಕಟಿಸುತ್ತಿದ್ದೇವೆ. ಕಳೆದ ವಾರ ತಡವಾಗಿ ಲೇಖನವು ನಮ್ಮ ಕೈ ಸೇರಿದುದುದರಿಂದ ಪ್ರಕಟಿಸಲಾಗಿಲ್ಲ. ಇದಕ್ಕಾಗಿ ವಾಚಕರ ಕ್ಷಮೆ ಕೋರುತ್ತೇವೆ. —ಸಂ]

—

ಸಿ. ಉನ್ನಿರಾಜ

ಭಾರತದಲ್ಲೇ ಮೊದಲನೆಯದಾದ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೇರಳ ಸರಕಾರವು ತನ್ನ ಆಡಳಿತೆಯ ಒಂದು ವರ್ಷ ಮುಗಿಸಿದೆ. ಕಳೆದ ಹನ್ನೆರಡು ತಿಂಗಳುಗಳಲ್ಲಿ ಮಾಡಿರುವ ಕೆಲಸದ ಬಗ್ಗೆ ಪಾರ್ಟಿ ಹಾಗೂ ಸರಕಾರವು ಹೆಮ್ಮೆ ಪಡಬಹುದಾಗಿದೆ. ಈ ಕಾಲಾವಧಿಯಲ್ಲಿ ಅದು ಮಹತ್ವದ ಸಾಧನೆಗಳನ್ನು ಗಳಿಸಿದೆ.

ಎಲ್ಲ ಕಡೆಗಳಿಂದಲೂ, ಸ್ವಹಿತ ಸಾಧಕರು, ವಿರೋಧ ಪಕ್ಷಗಳು ಮತ್ತು ಅಖಿಲ ಭಾರತ ಕಾಂಗ್ರೆಸ್ಸಿನ ಒಂದು ವಿಭಾಗದ ಧಾಳಿಯನ್ನು ಎದುರಿಸಿ ಕೇರಳ ಸರಕಾರವು ಅಸ್ತಿತ್ವದಲ್ಲಿರುವುದೇ ಒಂದು ಮಹತ್ವದ ಸಾಧನೆಯಾಗಿದೆ.

ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೇರಳ ಸರಕಾರವು ಆರು ತಿಂಗಳೂ ಸಹ ಅಧಿಕಾರದಲ್ಲಿ ಉಳಿಯುವುದಿಲ್ಲವೆಂದು ಕಾಂಗ್ರೆಸ್ ಪಕ್ಷವು ಲೆಖ್ಖ ಹಾಕಿದ್ದಿತು. ವಿವಿಧ ಜನವಿಭಾಗಗಳನ್ನು ಅವರ ಸ್ವಹಿತಗಳನ್ನು ಎತ್ತಿಕಟ್ಟಿ ಸರಕಾರದ ವಿರುದ್ಧ ಹೋರಾಡುವಂತೆ ಮಾಡಲು ಅವರು ಯತ್ನಿಸಿದರು. ಅಭದ್ರತೆ ಮತ್ತು ಅಶಿಸ್ತಿನ ಗುಲ್ಲೆಬ್ಬಿಸಿ, ಕೇಂದ್ರ ಸರಕಾರವು ಪ್ರವೇಶಿಸುವಂತೆ ಮಾಡಲು ಅವರು ಯತ್ನಿಸಿದರು. ಸರಕಾರದ ವಿರೋಧವಾಗಿ "ಹೋರಾಟ"ಗಳನ್ನು ಸಂಘಟಿಸಲು ಯತ್ನಿಸಿದರು. ಕೊನೆಯದಾಗಿ ಕೆಲವು ಕಮ್ಯೂನಿಸ್ಟ್ ಶಾಸನ ಸಭಾ ಸದಸ್ಯರಿಗೆ ಲಂಚ ಕೊಟ್ಟು ಕೊಂಡುಕೊಳ್ಳಲು ಮತ್ತು ಬೆದರಿಕೆ ಹಾಕಲು ಯತ್ನಿಸಿದರು.

ಈ ಬಗೆಯ ಅಸಮಾನವಾದ ಏಕತರದ ವಿರೋಧವನ್ನು ಇನ್ನಾವ ಸರಕಾರವೂ ಎದುರಿಸಬೇಕಾಗಿರಲಿಲ್ಲ. ಆದರೂ ಸರಕಾರವು ಅಧಿಕಾರದಲ್ಲಿ ಮುಂದುವರಿದಿದೆ ಮತ್ತು ಕಮ್ಯೂನಿಸ್ಟ್ ಪಾರ್ಟಿಯು ತನ್ನ ಆಂತರಿಕ ಐಕ್ಯತೆ ಮತ್ತು ಜನತೆಯೊಂದಿಗಿನ ಸಂಪರ್ಕವನ್ನು ಬಲಗೊಳಿಸಿಕೊಂಡಿದೆ. ಕಮ್ಯೂನಿಸ್ಟ್ ಸರಕಾರವು ಯಶಸ್ವಿಯಾಗಿ ಒಂದು ವರ್ಷ ಆಡಳಿತೆ ನಡೆಸಿರುವುದೇ ಅಲ್ಲದೆ ಎರಡನೆಯ ಸಾಲಿನ ಬಜೆಟನ್ನು ಸಹ ಅನುಮೋದಿಸಿದೆ.

ಪ್ರತಿಗಾಮಿಗಳ ಧಾಳಿಯಿಂದ ಹಿಮ್ಮೆಟ್ಟಲಿಲ್ಲ !

ಇದು ಹೇಗೆ ಸಾಧ್ಯವಾಯಿತು? ಮೊದಲನೆಯದಾಗಿ ಕೇರಳ ಸರಕಾರವು ಕಾರ್ಮಿಕ ರೈತ ವರ್ಗದ ಪಕ್ಷವಾದ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವುದರಿಂದ ಸಾಧ್ಯವಾಯಿತು. ಅದ್ದರಿಂದಾಗಿ ಹಿಂದಿನ ಸರಕಾರಗಳಂತೆ ಅಥವಾ ಇತರ ರಾಜ್ಯಗಳಲ್ಲಿನ ಕಾಂಗ್ರೆಸ್ ಸರಕಾರಗಳಂತೆ ಅಲ್ಲದೆ, ಅದು ನ್ಯಾಯವಾದ ಟೀಕೆಗಳನ್ನು ಯಾವ ವಿಭಾಗದಿಂದ ಬಂದರೂ ಸ್ವೀಕರಿಸಿ, ಪ್ರತಿಗಾಮಿಗಳ ಒತ್ತಾಯಕ್ಕೆ ಬಲಿಬೀಳಲು ನಿರಾಕರಿಸಿತು.

ಎರಡನೆಯದಾಗಿ, ಒಂದು ವರ್ಷದ ಅಲ್ಪ ಕಾಲಾವಧಿಯಲ್ಲಿ ಸರಕಾರವು ತನ್ನ ಶಾಸನ ಮತ್ತು ಅಧಿಕೃತ ಕ್ರಮಗಳ ಮೂಲಕ ರಾಜ್ಯದಲ್ಲಿರುವ ಸಾಮಾನ್ಯ ಜನತೆಯ ಹಿತಗಳನ್ನು ಸಾಧಿಸಲು ಯತ್ನಿಸುತ್ತಿದೆ ಎಂಬುದನ್ನು ಪ್ರದರ್ಶಿಸಿದೆ.

ಈ ಕ್ರಮಗಳು ಯಾವುವು ?

ಮಂತ್ರಿಮಂಡಲವು ಅಧಿಕಾರಕ್ಕೆ ಬಂದ ಒಂದು ವಾರದಲ್ಲೇ ಹೊಲದಿಂದ ರೈತರನ್ನು ಹೊರದೂಡುವುದನ್ನು ನಿಷೇಧಿಸುವ ಕಾಯಿದೆಯನ್ನು ತುರ್ತು ಆಜ್ಞೆ ಹೊರಡಿಸಿ ಜಾರಿಗೆ ತಂದಿತು. ಈ ಕಾಯಿದೆಯ ಮುಖ್ಯತ್ವವು ಎಲ್ಲರಿಗೂ ತಿಳಿದಿದೆ. ಭೂಸುಧಾರಣೆಗಳನ್ನು ನಿರರ್ಥಕಗೊಳಿಸಲು ಮತ್ತು ಅದಕ್ಕೆ ಆತಂಕ ತರಲು ಹೊಲದಿಂದ ರೈತನನ್ನು ಹೊರದೂಡುವ ಅಸ್ತ್ರವನ್ನು ಭೂಮಾಲೀಕರು ಯಾವಾಗಲೂ ಬಳಸುತ್ತಿದ್ದಾರೆ. ಎಲ್ಲ ವಿಭಾಗದ ಗೇಣಿದಾರರನ್ನೂ ರೈತರನ್ನೂ ರಕ್ಷಿಸುವ ಈ ಆಜ್ಞೆಯನ್ನು ಹೊರಡಿಸಿದ್ದು ಪ್ರಸಕ್ತದಲ್ಲಿರುವ ಕೇರಳ ಸರಕಾರವೊಂದೆ.

ಅಧಿಕಾರಕ್ಕೆ ಬಂದ ಒಂದು ತಿಂಗಳಿನಲ್ಲಿಯೇ ಸರಕಾರದ ವಶದಲ್ಲಿದ್ದ, ಆದರೆ ಸರಕಾರ ಅಥವಾ ಸಾರ್ವಜನಿಕ ಉಪಯೋಗಕ್ಕಾಗಿ ಬಳಸದಿದ್ದ ಭೂಮಿಯನ್ನು ಜಮೀನಿಲ್ಲದ ರೈತಕುಟುಂಬಗಳಿಗೆ ಶಾಶ್ವತವಾಗಿ ಹಂಚಲು ಸರಕಾರವು ಒಂದು ಯೋಜನೆಯನ್ನು ತಯಾರಿಸಿತು. ಈ ಯೋಜನೆಯು ಸೆಪ್ಟಂಬರ್ ತಿಂಗಳಲ್ಲಿ ಅಮಲಿಗೆ ಬಂದಿತು. ಗ್ರಾಮದಲ್ಲಿ ಹಂಚಿಕೆಗಾಗಿ ದೊರಕುವ ಒಟ್ಟು ಜಮೀನಿನಲ್ಲಿ ಶೇಕಡ ಇಪ್ಪತ್ತೈದು ಭಾಗವನ್ನು ಹರಿಜನರಿಗಾಗಿ ಮೀಸಲಾಗಿಡಲಾಗಿದೆ. ಈ ಯೋಜನೆಯನ್ನು ಜನಪ್ರಿಯ ಸಮಿತಿಗಳ ಮೂಲಕ, ಅಂದರೆ ರೈತ ಸಂಘದ, ಇತರ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳ ಮೂಲಕ ಅಮಲಿಗೆ ತರಲಾಗುತ್ತಿದೆ.

ಭಾರತದಲ್ಲಿ ಪ್ರಥಮ ಬಾರಿಗೆ ಕೇರಳದಲ್ಲಿ ವ್ಯವಸಾಯ ಕೂಲಿಗಾರರಿಗೆ ಕನಿಷ್ಠ ವೇತನವನ್ನು ನಿಗದಿಗೊಳಿಸಲಾಗಿದೆ. ದಿನದಲ್ಲಿ ಎಂಟು ಗಂಟೆಗಳ ಕೆಲಸಕ್ಕೆ ಪುರುಷರಿಗೆ ರೂ. 1-50ನ್ನು ಸ್ತ್ರೀಯರಿಗೆ ರೂ 1ನ್ನು ನಿಗದಿ ಮಾಡಲಾಗಿದೆ. ಸುಗ್ಗಿ ಕಾಲದಲ್ಲಿ ಆಯಾ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ವಿಶೇಷ ಕೂಲಿಯನ್ನು ನಿಗದಿ ಮಾಡಲಾಗಿದೆ.

ಹಳೆಯ ನೀತಿಗಳು ಬದಲಾಗಿವೆ

ಪರಂಪರೆಯಾಗಿ ಬಂದಿದ್ದಂತೆ ರೈತ ಸಂಘಗಳು, ಕಾರ್ಮಿಕ ಸಂಘಟನೆಗಳು ಮತ್ತಿತರ ಸಾರ್ವಜನಿಕ ಸಂಘಟನೆಗಳ ಮೇಲೆ ದಬ್ಬಾಳಿಕೆ ನಡೆಸಲು ಸರಕಾರವು ಪೋಲಿಸನ್ನು ಬಳಸುವುದನ್ನು ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದನಂತರ ನಿಲ್ಲಿಸಲಾಯಿತು.

ವಿರೋಧ ಪಕ್ಷಗಳ ನ್ಯಾಯ ಬದ್ಧವಾದ ಚಟುವಟಿಕೆಗಳನ್ನು ಮೊಟಕು ಮಾಡಲು ಪೋಲೀಸನ್ನಾಗಲೀ ಅಥವಾ ಕ್ರಿಮಿನಲ್ ಪ್ರೊಸೀಜರ್ ಕೋರ್ಟಿನ ಇತರ ಕಾನೂನುಗಳನ್ನಾಗಲೀ ಬಳಸುವುದಿಲ್ಲವೆಂದು ಸರಕಾರವು ಘೋಷಿಸಿತು.

ಕೈಗಾರಿಕಾ ಮತ್ತು ಕೃಷಿ ಸಂಬಂಧವಾದ ವಿವಾದಗಳನ್ನು ಇತ್ಯರ್ಥ ಮಾಡುವುದು ಪೋಲೀಸ್ ಅಧಿಕಾರಿಗಳ ಕರ್ತವ್ಯವಲ್ಲ ಎಂದು ತಿಳಿಸಿತು; ಅವರ ಕೆಲಸವು ಸಮಾಜದಲ್ಲಿ ಅಪರಾದ ಕೃತ್ಯಗಳನ್ನು ನಡೆಸುವವರನ್ನು ಹಿಡಿದು ಶಿಕ್ಷಿಸುವುದಾಗಿದೆ ಎಂದು ತಿಳಿಸಿತು.

ಈ ಹೊಸ ನೀತಿಯನ್ನು ಜಾರಿಗೊಳಿಸಿರುವುದರಿಂದಾಗಿ, ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ ಇತ್ಯಾದಿಗಳು ಭಾರತದಲ್ಲಿರುವ ಇತರ ರಾಜ್ಯಗಳಿಗಿಂತಲೂ ಇಲ್ಲಿ ಇನ್ನೂ ಹೆಚ್ಚು ವಾಸ್ತವವಾಗಿದೆ. ವಿರೋಧ ಪಕ್ಷಗಳಲ್ಲಿರುವ ಪ್ರಮುಖ ತಂಡಗಳು ಶಾಂತಿಗೆ ಭಂಗತರುವಂಥ ಪ್ರದರ್ಶನಗಳು ಮತ್ತು ಹೋರಾಟಗಳನ್ನು ನಡೆಸಿ, ಸರಕಾರವು ಪೋಲೀಸನ್ನು ಉಪಯೋಗಿಸುವಂತೆ ಬಲತ್ಕಾರ ಮಾಡಲುಯತ್ನಿಸಿದಾಗ್ಯೂ, ಈವರೆಗೆ ಎಲ್ಲಿಯೂ 144ನೇ ಸೆಕ್ಷನ್ ಜಾರಿಗೆ ತಂದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಅನಿವಾರ್ಯವಾಗಿ ಪೋಲೀಸನ್ನು ಬಳಸಲಾಗಿದೆ. ಎಲ್ಲಿ ಪೋಲೀಸರ ಬಳಕೆಯು ಅನವಶ್ಯವಾಗಿತ್ತು ಅಥವ ಅಧಿಕವಾಗಿತ್ತು ಎಂದು ಆರೋಪ ಬಂದಲ್ಲಿ ಅಂಥ ಸಂದರ್ಭಗಳಲ್ಲಿ ಸರಕಾರವು ಸಾರ್ವಜನಿಕ ವಿಚಾರಣೆಯನ್ನು ಆಜ್ಞೆ ಮಾಡಿದೆ.

ಕೈಗಾರಿಕಾ ವಿವಾದ ಅಥವಾ ಕೃಷಿ ವಿವಾದಗಳಲ್ಲಿ, ಉದಾಹರಣೆಗೆ ಕಟಂಪಲ್ಲಿ, ತ್ರಿಚೂರುಗಳಲ್ಲಿ ಪೋಲೀಸರು ಕೆಲವರನ್ನು ಬಂಧಿಸಿದಾಗ, ವಿವಾದವು ಇತ್ಯರ್ಥವಾದ ಒಡನೆಯೇ ಸರಕಾರ ಎಲ್ಲ ಬಂಧಿತರನ್ನು ಬಿಡುಗಡೆಮಾಡಿ, ಕೇಸುಗಳನ್ನು ಹಿಂತೆಗೆದುಕೊಂಡಿದೆ.

ಈ ವಿಷಯದಲ್ಲಿ ಕೇರಳ ಸರಕಾರದ ಸಾಧನೆಯನ್ನು ಇನ್ನಾವ ಸರಕಾರವೂ ಹೇಳಿಕೊಳ್ಳಲಾರದು.

ಹೊಸ ಕಾರ್ಮಿಕ ನೀತಿ

ಕೆಲಸಗಾರರು ಮತ್ತು ಮಾಲಿಕರ ನಡುವೆ ವಿವಾದವು ಉಂಟಾದಾಗ, ಆ ವಿವಾದವನ್ನು ಎಲ್ಲ ಮಟ್ಟಗಳಲ್ಲಿಯೂ ಸಹ ಸಂಧಾನ ಮತ್ತು ಮಾತುಕತೆಗಳ ಮೂಲಕ ಇತ್ಯರ್ಥಗೊಳಿಸಲಾಗಿದೆಯೇ ಹೊರತು, ಕಡ್ಡಾಯವಾಗಿ ಕೈಗಾರಿಕಾ ಪಂಚಾಯ್ತಿಗೆ ಒಪ್ಪಿಸುವ ಗೋಜಿಗೆ ಹೋಗಿಲ್ಲ. ಅಲ್ಲದೆ ಇಂಥ ವಿವಾದಗಳಲ್ಲಿ ಪೋಲೀಸರನ್ನು ಮಾಲಿಕರ ಪರವಾಗಿ ಬಳಸದೇ ಇರುವುದರಿಂದಾಗಿ ಮುಷ್ಕರ ನಡೆಸದೆಯೇ ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ಕಾರ್ಮಿಕರಿಗೆ ಸಹಾಯಕವಾಗಿದೆ.

ಹತ್ತು ತಿಂಗಳ ಅವಧಿಯಲ್ಲಿ ಕಾರ್ಮಿಕ ಸಚಿವರು ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳು ವ್ಯವಹರಿಸಿರುವ ಒಟ್ಟು 4,157 ಕಾರ್ಮಿಕ ವಿವಾದಗಳ, ಪೈಕಿ 3,780 ವಿವಾದಗಳು ತ್ರಿಪಕ್ಷ ಸಂಧಾನಗಳಿಂದ ಇತ್ಯರ್ಥವಾಗಿವೆ.

ಕಾರ್ಮಿಕರು ಮತ್ತು ಮಾಲಿಕರು ಸಮಸಂಖ್ಯೆಯಲ್ಲುಳ್ಳ ರಾಜ್ಯ ಕೈಗಾರಿಕಾ ಸಂಬಂಧ ಸಂಸ್ಥೆಯೊಂದನ್ನು ರಚಿಸಲಾಗಿದೆ. ರಾಜ್ಯದಲ್ಲಿ ದೀರ್ಘಾವಧಿ ಕೈಗಾರಿಕಾ ಶಾಂತಿಯನ್ನು ಸ್ಥಾಪಿಸಲು ಯಾವ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬ ವಿಷಯದಲ್ಲಿ ಉಪಸಮಿತಿಯು ಮಾಡಿರುವ ಸಲಹೆಯನ್ನು ಈಗ ಸಂಸ್ಥೆಯು ಚರ್ಚಿಸುತ್ತಿದೆ.

ಕೇರಳ ಸರಕಾರವು ಕನಿಷ್ಠ ಕೂಲಿಯ ಮಸೂದೆಯ ಅವ್ಯಾಪ್ತದೊಳಗಿರುವ ಎಲ್ಲ ಕೈಗಾರಿಕೆಗಳಲ್ಲೂ ಮತ್ತು ಇತರ ಐದು ಕೈಗಾರಿಕೆಗಳಲ್ಲೂ ಕನಿಷ್ಠ ವೇತನವನ್ನು ಗೊತ್ತುಮಾಡಿದೆ. ಬೇರೆ ಇನ್ನಾವ ರಾಜ್ಯದಲ್ಲಿಯಾದರೂ ಇಷ್ಟು ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ಗೊತ್ತು ಮಾಡಲಾಗಿದೆಯೇ ಎಂಬುದು ಸಂದೇಹವಾಗಿದೆ.

ಅಧಿಕ ವೇತನ

ಎಲ್ಲ ಕೈಗಾರಿಕೆಗಳಲ್ಲಿನ ಕಾರ್ಮಿಕರ ವೇತನವನ್ನು ಅಧಿಕಗೊಳಿಸಲು ಕೇರಳ ಸರಕಾರವು ಯತ್ನಿಸುತ್ತಿದೆ. ಈ ವಿಷಯದಲ್ಲಿ ಸರಕಾರವೇ ಮಾರ್ಗದರ್ಶನವನ್ನು, ತಾನು ನಡೆಸುತ್ತಿರುವ ಕೈಗಾರಿಕೆಗಳಲ್ಲಿ ವೇತನಗಳನ್ನು ಹೆಚ್ಚಿಸುವುದರ ಮೂಲಕ ಇತ್ತಿದೆ. ಸರಕಾರಿ ಇಂಜನಿಯರಿಂಗ್ ಕರ್ಮಶಾಲೆಯಲ್ಲಿ ಶೇಕಡ 20ರಷ್ಟು, ಕೇರಳ ಸೋಪು ಕಾರ್ಖಾನೆ ಮತ್ತು ಎಣ್ಣೆ ಕಾರ್ಖಾನೆಯಲ್ಲಿ ಶೇ. 15ರಿಂದ 75ರ ವರೆಗೆ ಮತ್ತು ರಾಜ್ಯದ ಸಾರಿಗೆ ಇಲಾಖೆಯಲ್ಲಿ ಶೇ. 7½ ವೇತನ ಹೆಚ್ಚಳವನ್ನು ಮತ್ತು 12½ ತುಟ್ಟಿ ಭತ್ಯದಲ್ಲಿ ಹೆಚ್ಚಳವನ್ನು ಮಾಡಲಾಗಿದೆ. ಖಾಸಗಿ ಉದ್ದಿಮೆಗಳಲ್ಲಿ ಶೇಕಡ 10ರಿಂದ 60ರ ವರೆಗೆ ಕೂಲಿ ಹೆಚ್ಚಳವಾಗಿದೆ.

ಎಲ್ಲ ಹಳ್ಳಿಗಳು ಮತ್ತು ಮುನಿಸಿಪಲ್ ವಾರ್ಡುಗಳನ್ನಾವರಿಸುವಂತೆ ಅಗ್ಗ ದರದ ಡಿಪೋಗಳನ್ನು ತೆರೆದುದು ಕಡಿಮೆ ವರಮಾನ ಬರುವ ಗುಂಪಿನ ಸಂಸಾರಗಳಿಗೆ ಕಾರ್ಡುಗಳನ್ನು ಹಂಚಲು ಏರ್ಪಾಡು ಮಾಡಿದ್ದು ಮತ್ತು ಕೇಂದ್ರ ಸರಕಾರದಿಂದ ದೊರೆತ ಅಕ್ಕಿಯನ್ನು ಎಲ್ಲ ಡಿಪೋಗಳಿಗೂ ಸರಬರಾಜು ಮಾಡಿ ವಿತರಣೆ ಮಾಡಿದ್ದು, ಈ ರೀತಿಯ ಸರಕಾರದ ನೀತಿಯಿಂದಾಗಿ ಮಾರುಕಟ್ಟೆಯಲ್ಲಿ ಕಳೆದ ಒಂದು ವರ್ಷದಲ್ಲಿ ಬೆಲೆಗಳನ್ನು ಹತೋಟಿಗೆ ತರಲು ಸಾಧ್ಯವಾಯಿತು. ಈ ಅಂಶವನ್ನು ಹಣಕಾಸಿನ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಮಂಡಿಸಿದ ಅಂಕಿ ಅಂಶಗಳಿಂದ ಖುಜುವಾತು ಮಾಡಬಹುದು.

(೯ನೇ ಪುಟ ನೋಡಿ)

ಮೈಸೂರು ವಿಧಾನ ಸಭೆಯಲ್ಲಿ –

ಪೋಲೀಸು ಖಾತೆಯ ಆಡಳಿತೆ ಬಗ್ಗೆ ಉಗ್ರ ಟೀಕೆ

ಮೈಸೂರು ವಿಧಾನ ಸಭೆಯ ಬಜೆಟ್ ಅಧಿವೇಶನದಲ್ಲಿ ಪೋಲೀಸು ಖಾತೆಯ ದುರಾಡಳಿತದ ಬಗ್ಗೆ ಸದಸ್ಯರು ಉಗ್ರವಾದ ಟೀಕೆ ಮಾಡಿದ್ದಾರೆ. ರಾಜ್ಯದ ಆಯವ್ಯಯ ಪಟ್ಟಿ (ಬಜೆಟ್) ಮೇಲೆ ನಡೆದ ಐದು ದಿನಗಳ ಚರ್ಚೆಯ ಕಾಲದಲ್ಲಿ ಸದಸ್ಯರು ಪೋಲೀಸು ಇಲಾಖೆಯ ನಡವಳಿಕೆಯನ್ನು ಕುರಿತು ಕಟುವಾಗಿ ಟೀಕಿಸಿದ್ದಾರೆ. ಹಣಕಾಸಿನ ಸಚಿವ ಶ್ರೀ ಟಿ. ಮರಿಯಪ್ಪನವರು ಮಂಡಿಸಿರುವ ಉಳಿತಾಯ ಬಜೆಟ್ಟನ್ನು ಸದಸ್ಯರು ಸ್ವಾಗತಿಸಿದರೂ ಅದು ತೃಪ್ತಿಕರವಾಗಿಲ್ಲವೆಂದಿದ್ದಾರೆ.

ಉಳಿತಾಯ ಬಜೆಟ್ ಮಂಡಿಸಿರುವುದು ಕೇವಲ ಮಾನಸಿಕ ತೃಪ್ತಿಯನ್ನು ಕೊಡುವುದೇ ಹೊರತು, ಬೇರೆ ಏನೂ ಇಲ್ಲ. ಜನ ಸಾಮಾನ್ಯರಿಗೆ ಯಾವ ಬಗೆಯ ರಿಯಾಯಿತಿಯನ್ನಾಗಲೀ ಸೌಲಭ್ಯವನ್ನಾಗಲೀ ಕೊಡುವ ಭರವಸೆಯನ್ನೀಯುವುದಿಲ್ಲವೆಂದು ತಿಳಿಸಿದ್ದಾರೆ.

ಈ ಅಧಿವೇಶನದ ಕಾಲಾವಧಿಯಲ್ಲಿ ಪೋಲೀಸು ಇಲಾಖೆಯು ಟೀಕೆಗೆ ಗುರಿಯಾಗಿರುವಷ್ಟು ಇನ್ನಾವ ಇಲಾಖೆಯೂ ಆಗಿಲ್ಲವೆಂದು ಹೇಳಬಹುದು. ಮುನಿಯಮ್ಮ ಪ್ರಕರಣ, ಹೆಚ್. ಎ. ಎಲ್. ನೌಕರರ ಮೇಲೆ ಗೋಲಿಬಾರು ಮತ್ತು, ಇತರ ಪ್ರಕರಣಗಳು ಅಧಿವೇಶನ ಕಾಲದಲ್ಲಿ ಉದ್ಭವಿಸಿದ್ದು ಇದಕ್ಕೆ ಕಾರಣವಾಗಿದೆ ಎಂದು ಸ್ಪಷ್ಟವಾಗುತ್ತದೆ. ಮೇಲಿನ ಈ ಪ್ರಕರಣಗಳನ್ನು ಕುರಿತು ವಿರೋಧ ಪಕ್ಷದ ಸದಸ್ಯರುಗಳು ಮಂಡಿಸಿದ್ದ ನಿಲುವಳಿ ಸೂಚನೆಗಳನ್ನು ಸಭಾ ಪತಿಗಳು ಕಟ್ಟಿ ಹಾಕಿದ್ದರೂ ಸಹಾ, ಸದಸ್ಯರು ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ ಗೃಹಸಚಿವ ಶ್ರೀ ಪೂಣಚ್ಚರವರು ಟೀಕೆಗಳಿಗೆ ಉತ್ತರವಿತ್ತಿರುವುದು ತೀರ ಅಸಮರ್ಪಕವಾಗಿದೆ. ಇದು ಸರಕಾರದ ಅಲಕ್ಷ್ಯ ಧೋರಣೆಯನ್ನು ವ್ಯಕ್ತಗೊಳಿಸುತ್ತದೆ. ಕೇರಳದಲ್ಲಿ ಸಾಮಾನ್ಯವಾದ ಲಾಠಿಚಾರ್ಜ ನಡೆದಿದ್ದರೂ ಅದರ ಬಗ್ಗೆ ವಿಚಾರಣೆ ನಡೆಸಲು ಸರಕಾರ ಮುಂದೆ ಬಂದಿದ್ದರೆ, ಮೈಸೂರು ಸರಕಾರವು ಗೋಲೀಬಾರು ನಡೆದು ಒಬ್ಬನ ಮರಣವು ಸಂಭವಿಸಿದ್ದರೂ ಸಹ ವಿಚಾರಣೆ ನಡೆಸಲು ನಿರಾಕರಿಸಿದೆ. ಪೋಲೀಸರ ದುರ್ವರ್ತನೆಯನ್ನು ಸರಕಾರ ಮುಚ್ಚಿಡಲು ಯತ್ನಿಸುತ್ತಿದೆ.

ಕಮ್ಯೂನಿಸ್ಟ್ ಶಾಸನಸಭಾ ಸದಸ್ಯರಾದ ಶ್ರೀ ಎಂ. ಸಿ. ನರಸಿಂಹನ್‌ರವರು ಬಜೆಟ್‌ನ ಮೇಲೆ ಮಾತನಾಡುತ್ತಾ ಸರಕಾರದ ನೀತಿಗಳನ್ನು ಟೀಕಿಸಿದರು. ಅವರ ಭಾಷಣದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

"ಈ ಬಾರಿಯ ಬಜೆಟ್ಟಿನಲ್ಲಿ ಪರಿಹಾರವನ್ನು ನಿರೀಕ್ಷಿಸಿದವರಿಗೆ ನಿರಾಶೆಯಾಗಿದೆ. ಪರಿಹಾರಕ್ಕಾಗಿ ಇಂದು ಇರುವ ಜರೂರು ಅಗತ್ಯತೆಯನ್ನು ಸರಕಾರ ಅರಿತಂತೆ ಕಾಣುವುದಿಲ್ಲ. ಇದು ಸರಕಾರದ ಅಸಮರ್ಥತೆಯನ್ನು ಎತ್ತಿ ತೋರಿಸುತ್ತದೆ" ಎಂದು ತಿಳಿಸಿದರು.

ಮುಂದುವರಿದು ಅವರು "ಆಡಳಿತ ಯಂತ್ರದ ಸುಧಾರಣೆಯಲ್ಲಿ ಯೋಜನೆಗಳ ಕಾರ್ಯತ್ವರಿತವಾಗಿ ನಡೆಯಬೇಕು. ಬಜೆಟ್ಟಿನಲ್ಲಿ ವ್ಯವಸಾಯಕ್ಕಾಗಲೀ ಅಥವಾ ಕೈಗಾರಿಕೆಗೆಂದು ಮೀಸಲಾಗಿರಿಸಿರುವ ಒಟ್ಟು ಹಣ ಶೇ 13 ಆಗಿದೆ. ಅಲ್ಯೂಮಿನಿಯಂ, ಕಚ್ಚಾ ಫಿಲಂ ತಯಾರಿಕೆ ಕೈಗಾರಿಕೆಗಳನ್ನು ಸರಕಾರವು ಕೈಬಿಟ್ಟದ್ದರಿಂದಾಗಿ ಅದು ಈಗ ಮದರಾಸಿಗೆ ಹೋಗಿದೆ.

ಸರಕಾರದ ಆಡಳಿತದಲ್ಲಿರುವ ಕೈಗಾರಿಕೆಗಳು ಅವ್ಯವಸ್ಥೆಯಲ್ಲಿವೆ. ಪೋರ್ಸಲೇನ್ ಕಾರ್ಖಾನೆಯಲ್ಲಿನ ಅವ್ಯವಸ್ಥೆಯ ಬಗ್ಗೆ ಸರಕಾರ ಈಗತಾನೆ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿದೆ. ಸರಕಾರ ನಡೆಸುತ್ತಿರುವ ಇತರ ಎಲ್ಲ ಕೈಗಾರಿಕೆಗಳಲ್ಲೂ ಸಹ ವಿಚಾರಣೆ ನಡೆಸುವುದು ಅಗತ್ಯ. ದಕ್ಷತೆಯಿಂದ ಆಡಳಿತ ನಿರ್ವಹಿಸಿದಲ್ಲಿ ಈ ಕೈಗಾರಿಕೆಗಳ ಅಭಿವೃದ್ಧಿಗೆ ಅವಕಾಶವಿದೆ" ಎಂದು ತಿಳಿಸಿದರು.

ಸರಕಾರದ ಆಹಾರ ನೀತಿಯ ಬಗ್ಗೆ ಮಾತನಾಡುತ್ತಾ, ಸರಕಾರವು ಆಹಾರ ಕ್ಷೇತ್ರದಲ್ಲಿ ನಮ್ಮ ರಾಜ್ಯವು ಸ್ವಯಂ ಪರಿಪೂರ್ಣವಾಗುವುದು ಎಂದು ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವ ಸ್ಥಿತಿಯೇನೆಂದರೆ, ಆಹಾರ ಬೆಳೆಯುತ್ತಿದ್ದ ಜಮೀನಿನ ಪ್ರದೇಶದ ಪ್ರಮಾಣ ಈ ವರ್ಷದಲ್ಲಿ ಇನ್ನು ಕಡಿಮೆಯಾಗಿದೆ. ಆಹಾರ ಬೆಲೆ ಏರಿಕೆಯನ್ನು ಸರಕಾರ ಯಶಸ್ವಿಯಾಗಿ ತಡೆಹಿಡಿಯಲಾಗಿಲ್ಲವೆಂಬುದು ಪರಿಸ್ಥಿತಿಯನ್ನು ಪರಿಶೀಲಿಸಿದಲ್ಲಿ ವ್ಯಕ್ತವಾಗುತ್ತದೆ. ಅಗ್ಗದರದ ಡಿಪೋಗಳನ್ನು ಮುಚ್ಚಲು ಸರಕಾರ ತೀರ್ಮಾನಿಸಿರುವುದು ಜನತೆಯನ್ನು ತೀವ್ರ ಕಷ್ಟಕ್ಕೆ ಗುರಿಮಾಡುತ್ತಿದೆ. ಸರಕಾರವು ಆಹಾರ ಕ್ಷೇತ್ರದಲ್ಲಿ ಅನುಸರಿಸುತ್ತಿರುವ ನೀತಿಯು ದೇಶಕ್ಕೆ ಹಾನಿತರುವಂಥ ನೀತಿಯಾಗಿದೆ ಎಂದು ತಿಳಿಸಿದರು. ಅಶೋಕ ಮೆಹ್ತಾ ವರದಿಯಲ್ಲಿ ಕೆಲವು ಶಿಫಾರಸ್ಸುಗಳನ್ನು ಅನಾವೃಷ್ಟಿ ಪ್ರದೇಶಗಳಿಗೆ ಸಂಬಂಧಿಸಿದಂತೆ ಮಾಡಲಾಗಿದೆ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ತಿಳಿಸಿದರು.

ಸರಕಾರದ ಕಾರ್ಮಿಕ ವಿರೋಧ ನೀತಿ

ಸರಕಾರದ ಕಾರ್ಮಿಕ ನೀತಿಯನ್ನು ಕುರಿತು ಮಾತನಾಡುತ್ತಾ ಶ್ರೀ ನರಸಿಂಹನ್‌ರವರು "ಸರಕಾರವು ಕಾರ್ಮಿಕರ ಬಗ್ಗೆ ನಿರ್ಲಕ್ಷ್ಯ ನೀತಿಯನ್ನು ಅನುಸರಿಸುತ್ತಿದೆಯೆಂದು ತಿಳಿಸಿದರು. ಎಚ್. ಎ. ಎಲ್. ನೌಕರರ ವಿಷಯದಲ್ಲಿ ಸರಕಾರವು ವಿಮಾನ ಕಾರ್ಖಾನೆ ಜನರಲ್ ಮ್ಯಾನೇಜರ್ ಹೇಳಿದಂತೆ ಸರಕಾರ ನಡೆದುಕೊಂಡಿದೆ. ಸರಕಾರವು ಭದ್ರವಾದ ನಿಲುವನ್ನು ತಾಳಿ, ಶೀಘ್ರ ಒಪ್ಪಂದಕ್ಕಾಗಿ ಪ್ರಶ್ನೆಯನ್ನು ಕೇಂದ್ರ ಸರಕಾರಕ್ಕೆ ಕೊಂಡೊಯ್ಯಬೇಕಾಗಿತ್ತು. ಆದರೆ ಸರಕಾರ ಹಾಗೆ ಮಾಡದಿದ್ದುದರಿಂದ, ಇಂದು ತೀವ್ರ ಪರಿಸ್ಥಿತಿಗೆ ಎಡೆಗೊಟ್ಟು, ಅನೇಕ ಕಾರ್ಮಿಕರು ತೊಂದರೆಗೊಳಗಾಗಿದ್ದಾರೆ.

ಸರಕಾರವು ನಿರ್ವಹಿಸದಿರುವ ಮತ್ತೊಂದು ಅಂಶವೆಂದರೆ, ಪತ್ರಿಕೋದ್ಯೋಗಿಗಳಿಗೆ ನ್ಯಾಯವಾದ ವೇತನವನ್ನು ನಿಗದಿ ಮಾಡಲು ಕೇಂದ್ರ ಸರಕಾರ ಪ್ರಯತ್ನಪಟ್ಟು ಒಂದು ನಿರ್ಧಾರಕ್ಕೆ ಬಂದಿತು. ವೇತನ ಸಮಿತಿ ಸಲಹೆಗಳನ್ನು ಒಪ್ಪಿಕೊಂಡಿತು. ಆದರೆ ಆ ನಿರ್ಧಾರಗಳನ್ನು ಸುಪ್ರೀಂ ಕೋರ್ಟು ರದ್ದುಗೊಳಿಸಿದೆ. ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ನನಗೆ ಭಿನ್ನಾಭಿಪ್ರಾಯವಿದೆ. ಅದು ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದಲ್ಲ. ಆದರೆ ನಾನು ಅದನ್ನು ಟೀಕೆ ಮಾಡಹೋಗುವುದಿಲ್ಲ. ಸರಕಾರವು ಪತ್ರಿಕಾ ಮಾಲಿಕರು ಮತ್ತು ಸಂಬಂಧಪಟ್ಟವರನ್ನು ಕರೆಸಿ ಒಂದು ಒಪ್ಪಂದ ಉಂಟಾಗುವಂತೆ ಮಾಡಲು ಏನೂ ಕ್ರಮ ಕೈಗೊಂಡಿಲ್ಲ. ಈಗ ಪತ್ರಿಕಾ ಮಾಲಿಕರುಗಳು ಇದ್ದಕ್ಕಿದ್ದಂತೆಯೇ ವೇತನಗಳನ್ನು ಕಡಿಮೆ ಮಾಡಿದಲ್ಲಿ ಬಹಳ ತೊಂದರೆ ಆಗುತ್ತದೆ. ಆದ್ದರಿಂದ ಸರಕಾರ ಕೂಡಲೇ ಇದಕ್ಕೆ ಗಮನ ಕೊಡುವುದು ಅಗತ್ಯವೆಂದು ತಿಳಿಸಿದರು.

ಸರಕಾರದ ಕಾರ್ಮಿಕ ಇಲಾಖೆಯು ಬಹಳ ಮಂದಗತಿಯಿಂದ ಸಾಗುತ್ತಿದೆಯೆಂದೂ, ಕೈಗಾರಿಕಾ ವಿವಾದಗಳನ್ನು ಶೀಘ್ರವಾಗಿ ಬಗೆಹರಿಸುತ್ತಿಲ್ಲವೆಂದೂ ತಿಳಿಸಿ, ಅಂಕಿಅಂಶಗಳನ್ನಿತ್ತರು. ಮೈಸೂರು ರಾಜ್ಯದಲ್ಲಿ 1957 ರ ಜನವರಿಯಿಂದ ಸೆಪ್ಟಂಬರ್ ತಿಂಗಳವರೆಗೆ 93 ಮುಷ್ಕರಗಳ ನಡೆದು 2,78,718 ದುಡಿಯುವ ದಿನಗಳು ವ್ಯರ್ಥವಾಗಿದೆ. ಹದಿನೆಂಟು ರಿಟ್ರೆಂಚ್‌ಮೆಂಟ್ ಪ್ರಕರಣಗಳಾಗಿ 379 ಕೆಲಸಗಾರರಿಗೆ ನಿರುದ್ಯೋಗವಾಗಿದೆ. 103 ಉದ್ದಿಮೆಗಳು ಮುಚ್ಚಲ್ಪಟ್ಟು 8501 ಕೆಲಸಗಾರರು ಉದ್ಯೋಗವಿಲ್ಲದೆ ಇದ್ದಾರೆ. ಕಾರ್ಖಾನೆಗಳಲ್ಲಿ ಪ್ಲೇ ಆಫ್‌ನಿಂದಾಗಿ 44,598 ಮಂದಿಗೆ ಉದ್ಯೋಗವು ಸಿಕ್ಕದೆ ಇದೆ. ಈ ರೀತಿಯಲ್ಲಿ 10 ತಿಂಗಳ ಅವಧಿಯಲ್ಲಿ 3,23,316 ಕೆಲಸದ ದುಡಿಮೆ ದಿನಗಳು ವ್ಯರ್ಥವಾಗಿದೆ. ಈ ಅಂಕಿಅಂಶಗಳು ಸರಕಾರದ ಕಾರ್ಮಿಕ ನೀತಿ

(೬ನೇ ಪುಟ ನೋಡಿ)

ಯಾರೇ ಬರಲಿ - ಒಗ್ಗಟ್ಟೆಲ್ಲಿ

ಕತ್ತೆಯ ಬಾಲಕೆ ಡಬ್ಬವ ಕಟ್ಟಿ
ಡಬ್ಬದ ಒಳಗೆ ಪಟಾಸು ಪೆಟ್ಟಿ
ಸಮಯವ ಸಾಧಿಸಿ, ಬೆಂಕಿಯ ಹೊತ್ತಿಸಿ
ಕತ್ತೆಯ ಬೀದಿಗೆ ಓಡಿಸಲು.........

ಮತಿಕೆಡಸುವ ಆ ಪಟಾಕಿ ಸದ್ದು
ಬೆದರಿದ ಕತ್ತೆ ನಾಗಾಲೋಟ
ಓಡುವ ಕತ್ತೆಯ, ನೋಡುವ ಜನರು,
ಮನಬಂದಂತೆ—ಮಾತಾಡುವರು.

ಹಾಗೇ ಆಯಿತು—ನಮ್ಮೀ ರಾಜ್ಯದ
ರಾಜ್ಯವನಾಳುವ—ಕಾಂಗ್ರೆಸ್ ಪಾರ್ಟಿ.

"ಒಮ್ಮತ, ಬಹುಮತ, ಬಹು ಸಂತೋಷ
ನೀನೇ ನಾಯಕ—ಹಾಕುವೆ ಹಾರ
ಬಂಗಲೆ ಕಾರು, ಹಿಡಿ ಅಧಿಕಾರ,
ನೀಡೈ ನಮಗೆ—ನಿತ್ಯಾಹಾರ"

ಎಂದಾಡಿದ ಜನ, ವರುಷದ ಒಳಗೆ,
ಬಾಲವ ಹಿಡಿದಾ ಭಕ್ತರ ಗುಂಪೇ,
ಬಾಲಕೆ ಬೆಂಕಿಯ ಹೊತ್ತಿಸುತಿಹರು,
ಸಹಿಸಂಗ್ರಹದ—ಹಳೆ ಹವ್ಯಾಸ.

ಈ ಮಂತ್ರಿಯು ಹೋದರೆ ಆಗುವುದೇನು?
ತಂತ್ರಿಯು ಬಂದರೆ-ಬದಲಿನ್ನೇನು?
ಯಾರೇ ಬರಲಿ—ಒಗ್ಗಟ್ಟೆಲ್ಲಿ?
ಎಷ್ಟೇ ಕೊಟ್ಟರು—ತೃಪ್ತಿಯದೆಲ್ಲಿ?

ಅನೇಕ ಪ್ರಾಂತಗಳಲ್ಲಿದೆ—ಗಂಡಾಂತರ,
ಆಂಧ್ರವು ಮುಂದೆ—ಒರಿಸ್ಸ ಹಿಂದೆ?
ಪಂಜಾಬಿನಲೂ—ಬಂಗಾಳದಲೂ
ಕರ್ನಾಟಕದಲಿ—ಪೂರ್ತಿನಾಟಕ.

ಹೀಗೇಕಾಯಿತು ಎನ್ನುವಿರಾ,

ಹುತ್ತದ ಒಳಗೆ ಹುತ್ತವು ಬೆಳೆಯಲು
ಒಂದೇ, ಎರಡೆ, ಗುಂಪು ಗಡಂಗು,
ಕದನ ವಿರಾಮ ಕಾಣುವುದಿಲ್ಲ.
ಕಾಂಗ್ರೆಸ್ ಪಾರ್ಟಿ—ಮದ್ಯದ ಮಡಿಕೆ
ಹೊರಹಾಕುವುದು—ಋಣ ತೀರಿದ ಬಳಿಕ.

—"ಆನಂದನ್"

ಕೇರಳದಲ್ಲಿ ನಮ್ಮ ಸರಕಾರದ

ಕೇರಳ ಸರಕಾರವು ತನ್ನ ಒಂದು ವರ್ಷದ ಆಡಳಿತೆಯಲ್ಲಿ ಅತ್ಯಂತ ಮಹತ್ವದ್ದಾದುದೇನನ್ನು ಸಾಧಿಸಿದೆ ಎಂದು ಯಾರಾದರೂ ನನ್ನನ್ನು ಪ್ರಶ್ನಿಸಿದಲ್ಲಿ, ನಾನು ಭೂಸುಧಾರಣೆಗಳನ್ನಾಗಲೀ, ಹೊಸ ಪೋಲೀಸು ನೀತಿಯನ್ನಾಗಲೀ, ವಿದ್ಯಾಭ್ಯಾಸ ಮಸೂದೆಯಾಗಲಿ, ಅಥವಾ ಇನ್ನಾವುದೇ ಆಗಲಿ ಕುರಿತು ಹೇಳುವುದಿಲ್ಲ.

ಈ ಪ್ರತಿಯೊಂದು ವಿಶಿಷ್ಟ ಕ್ರಮವೂ ಸಹ ಮಹತ್ವವಾಗಿದೆ, ನಿಜ. ಈ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ. ಸ್ವಾತಂತ್ರ್ಯಾನಂತರದಲ್ಲಿ ಪ್ರಜಾಪ್ರಭುತ್ವ ಆಡಳಿತೆಯು ವ್ಯವಸ್ಥೆಗೊಂಡು ತಮ್ಮ ಜೀವನ ಸ್ಥಿತಿಗತಿಗಳು ಉತ್ತಮಗೊಳ್ಳುವುವು ಎಂದು ಆಶಿಸಿದ್ದ, ಆದರೆ ಕಳೆದ ಹತ್ತು ವರ್ಷಗಳಲ್ಲಿ ಈ ಆಶೆಗಳೆಲ್ಲವೂ ಭಗ್ನಗೊಂಡಿದ್ದ ಲಕ್ಷಾಂತರ ಸಾಧಾರಣ ಜನತೆಗೆ ಮೇಲಿನ ಎಲ್ಲ ಸುಧಾರಣೆಗಳು ನಿಸ್ಸಂಶಯವಾಗಿ ಅನುಕೂಲ ಮಾಡಿಕೊಟ್ಟಿದೆ.

ಆದರೆ, ಇವೆಲ್ಲಕ್ಕಿಂತ ಅತ್ಯಂತ ಮಹತ್ವವಾದ ಅಂಶವೆಂದರೆ, ಕಮ್ಯೂನಿಸ್ಟ ಸರಕಾರವು ಅಧಿಕಾರದ ಒಂದು ವರ್ಷ ಅವಧಿಯಲ್ಲಿ ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟ್ ಪಾರ್ಟಿಯಂತೆಯೇ ರಾಷ್ಟ್ರೀಯ ಗುರಿಯನ್ನು ಹೊಂದಿರುವ—ಅಂದರೆ ಸಮಾಜವಾದೀ ಭಾರತವನ್ನು ನಿರ್ಮಾಣ ಮಾಡುವ ಗುರಿ—ಇತರೇ ಪಕ್ಷಗಳಿಗೆ ಸೇರಿರುವ ವಿಶಾಲ ಜನಸಮೂಹಗಳ ನಡುವೆ ಇದ್ದ ಅಡ್ಡಗೋಡೆಯನ್ನು ಮುರಿಯಲು ಆರಂಭಿಸಿದುದು.

ಒಂದು ಅಪಪ್ರಚಾರದ ಸಮಾಧಿ

ಕಳೆದ ಒಂದು ವರ್ಷದಲ್ಲಿ ನಮ್ಮ ಸರಕಾರದ ಚಟುವಟಿಕೆಗಳು ಒಂದು ಕಮ್ಯೂನಿಸ್ಟ್ ವಿರೋಧಿ ಅಪಪ್ರಚಾರವನ್ನು ಯಶಸ್ವಿಯಾಗಿ ಸಮಾಧಿಗೊಳಿಸಿದೆ. ಅಂದರೆ, ಕಮ್ಯೂನಿಸ್ಟ್ ಪಕ್ಷವು ಅಧಿಕಾರ ವಹಿಸಿಕೊಂಡಲ್ಲಿ ನಮ್ಮ ರಾಷ್ಟ್ರೀಯ ಪರಂಪರೆಯಲ್ಲಿರುವ ಒಳಿತೆಲ್ಲವೂ ಮತ್ತು ನೈತಿಕ ಭಾವಗಳೆಲ್ಲವೂ ದೇಶದಲ್ಲಿ ಇಲ್ಲವಾಗುತ್ತವೆ ಎನ್ನುವ ಪ್ರಚಾರ ಮುಳುಗಿಸಿದೆ.

ಕಮ್ಯೂನಿಸ್ಟ್ ವಿರೋಧಿಗಳು ಯಾವಾಗಲು ಕಮ್ಯೂನಿಸ್ಟ್ ಪಾರ್ಟಿಗೆ ಮತವೀಯ ಕೂಡದೆಂದು ಮತದಾರರನ್ನು ಕೇಳಿಕೊಳ್ಳುವಾಗ "ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ"ಯನ್ನು ಕಮ್ಯೂನಿಸ್ಟರು ತರುತ್ತಾರೆ ಎಂದು ಪ್ರಚಾರ ಮಾಡುವ ಪ್ರತೀತಿ ಇದೆ. ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಲ್ಲಿ ದೇವಸ್ಥಾನಗಳು, ಇಗರ್ಜಿಗಳು ಮತ್ತು ಮಸೀದಿಗಳ ಪಾವಿತ್ರ್ಯವು ನಾಶವಾಗುತ್ತದೆ ಮತ್ತು ಎಲ್ಲ ಧಾರ್ಮಿಕ ಮನೋವೃತ್ತಿವುಳ್ಳ ಜನರು ಅತ್ಯುತ್ತಮವಾದದ್ದೆಂದು ಕಾಪಾಡಿಕೊಂಡಿರುವುದೆಲ್ಲವೂ ಹಾಳಾಗುತ್ತದೆ ಎಂಬುದಾಗಿ ಎಲ್ಲ ಮತಗಳ ಧಾರ್ಮಿಕ ಮನೋವೃತ್ತಿವುಳ್ಳ ಜನಗಳ ನಡುವೆ ಮೇಲಿಂದ ಮೇಲೆ ಪ್ರಚಾರ ಮಾಡಲಾಗುತ್ತಿದೆ.

ಅಸಂಖ್ಯಾತವಾದ ಕಮ್ಯೂನಿಸ್ಟ್ ವಿರೋಧಿ ಪ್ರಚಾರಗಳನ್ನು ನಡೆಸಿ, ಕಮ್ಯೂನಿಸ್ಟ್ ಪಕ್ಷವು ಅಧಿಕಾರಕ್ಕೆ ಬಂದರೆ ಅದು ದೇಶದ ಸರ್ವನಾಶಕ್ಕೆ ಆರಂಭ ಎಂದು ಮನದಟ್ಟು ಮಾಡಲು ಯತ್ನಿಸಲಾಗಿದೆ. ಆದರೆ ಅದೇ ಸಮಯದಲ್ಲಿ ಇನ್ನಾವ ಪಕ್ಷವೇ ಅಧಿಕಾರಕ್ಕೆ ಬಂದರಾಗಲಿ ಹೋದರಾಗಲಿ ಚಿಂತೆ ಇಲ್ಲ ಎಂದು ಜನರಲ್ಲಿ ಪ್ರಚಾರ ಮಾಡಲಾಗಿದೆ.

ಕಳೆದ ಒಂದು ವರ್ಷ ನಾವು ಅಧಿಕಾರದಲ್ಲಿದ್ದುದ್ದು ಈ ಎಲ್ಲ ಕಮ್ಯೂನಿಸ್ಟ್ ವಿರೋಧಿ ವಾದಗಳನ್ನು ಸುಳ್ಳಾಗಿಸಿದೆ.

ಮಲಬಾರಿನ ಮುಸಲ್ಮಾನರಿಗೆ ತಮ್ಮ ಧಾರ್ಮಿಕ ಆಚರಣೆಗಳಿಗೆ ಹೊಸ ಆತಂಕ ಬರುವ ಬದಲು, ಹಿಂದಿನ ಆಡಳಿತೆಗಳಡಿಯಲ್ಲಿ ಇದ್ದ ಆತಂಕಗಳನ್ನು ತೊಡೆದು ಹಾಕಿರುವುದೇ ಅಲ್ಲದೆ, ಅದರ ಪ್ರಾರ್ಥನಾ ಸ್ಥಳಗಳ ಗೌರವ ರಿಪೇರಿಯು ಆಗಿದೆ ಎಂಬುದು ಅರಿವಾಗಿದೆ. (ಈ ಸಂದರ್ಭದಲ್ಲಿ "ಮಲಾಪುರಂ ನೇರ್‌ಚ್" ಎನ್ನುವ ಧಾರ್ಮಿಕ ಉತ್ಸವದ ಮೇಲೆ ಕಳೆದ ಹತ್ತು ವರ್ಷಗಳಿಂದ ಇದ್ದ ನಿಷೇಧವನ್ನು ಈ ವರ್ಷ ತೆಗೆದು ಹಾಕಿ ಉತ್ಸವ ನಡೆಸಲು ಅನುಮತಿ ಇತ್ತದ್ದನ್ನು ಇಲ್ಲಿ ಉಲ್ಲೇಖಿಸಬಹುದು).

ಕಮ್ಯೂನಿಸ್ಟ್ ಸರಕಾರವು ತರುತ್ತಿರುವ ವಿದ್ಯಾಭ್ಯಾಸ ಮಸೂದೆ ಮೊದಲಾದ ಸುಧಾರಣೆಗಳು ಧಾರ್ಮಿಕ ಸ್ವಾತಂತ್ರವನ್ನು ಮೊಟಕು ಮಾಡುತ್ತದೆ ಎಂಬ ಪ್ರಚಾರವು ಹುರುಳಿಲ್ಲದ್ದು ಎಂದು ಧಾರ್ಮಿಕ ಮನೋವೃತ್ತಿಯುಳ್ಳ ಕ್ರಿಶ್ಚಿಯನ್ನರಿಗೆ ಅರಿವಾಗಿದೆ. ಬದಲಾಗಿ ನಮ್ಮ ಸರಕಾರವು ಅವರ ಧಾರ್ಮಿಕ ಕ್ಷೇತ್ರಗಳ ಬಗ್ಗೆ ಹೆಚ್ಚಿನ ಗೌರವ ತೋರ್ಪಡಿಸಿದೆ ಎಂಬುದು ಅವರಿಗೆ ಗೊತ್ತಾಗಿದೆ.

ಇತರೇ ಎಲ್ಲ ಸರಕಾರಗಳಂತೆ ಕಮ್ಯೂನಿಸ್ಟ್ ಸರಕಾರದ ಆಡಳಿತೆಯಲ್ಲಿ ಧಾರ್ಮಿಕ ಸ್ವಾತಂತ್ರಕ್ಕೆ ಅಪಾಯವಿಲ್ಲವೆಂಬುದು ಎಲ್ಲ ವಿಭಾಗದ ಜನರಿಗೂ ಮನದಟ್ಟಾಗಿದೆ.

ಧಾರ್ಮಿಕ ವಿಷಯದಲ್ಲಿ ಹೇಗೋ ಹಾಗೆಯೇ ನಮ್ಮ ಸಾರ್ವಜನಿಕ ಕ್ಷೇತ್ರದ ಇತರೇ ವಿಭಾಗಗಳಲ್ಲಿಯೂ ಸಹ ಅಷ್ಟೆ ನಿಜ. ಕೇರಳಕ್ಕೆ ಬರುವವರಿಗೆ ಕಮ್ಯೂನಿಸ್ಟ್ ಮಂತ್ರಿಗಳು, ಅವರ ಕೆಲಸದ ರೀತಿ ಮತ್ತು ನಡವಳಿಕೆಯಲ್ಲಿ ಇತರ ಮಂತ್ರಿಗಳಿಗಿಂತ ಬೇರೆ ವಿಶೇಷ ಏನೂ ಇಲ್ಲವೆನಿಸುತ್ತದೆ. ಕಮ್ಯೂನಿಸ್ಟ್ ಪಾರ್ಟಿಯು ಅಧಿಕಾರಕ್ಕೆ ಬಂದಿರುವುದರಿಂದ ಸಾಮಾನ್ಯ ಜನರ ಜೀವನದಲ್ಲೇನೂ ವ್ಯತಾಸವಾಗಿಲ್ಲ ಎಂದು ಕೆಲವರಿಗೆ ಅನ್ನಿಸಬಹುದು; ಇದನ್ನೇ ಕುರಿತು ನಾನು ವಿವರಿಸಲಿದ್ದೇನೆ.

ನಾನು ಇಲ್ಲಿ ಒಂದಂಶವನ್ನು ಒತ್ತಿ ಹೇಳಬಯಸುತ್ತೇನೆ, ಅದು ಕಮ್ಯೂನಿಸ್ಟ್ ಮಂತ್ರಿಗಳು "ಇತರೇ ಸರಕಾರಗಳಷ್ಟೆ ಕೆಟ್ಟದಾಗಿದ್ದಾರೆ ಅಥವ ಒಳ್ಳೆಯವರರಾಗಿದ್ದಾರೆ" ಎಂದು ಹೇಳುವುದು, ಕಮ್ಯೂನಿಸ್ಟ್ ಸರಕಾರವು ಇತರೇ ಸರಕಾರಗಳಿಗಿಂತ ಬೇರೆ ಇದೆ, ಅದು ರಾಷ್ಟ್ರೀಯ ವಿರೋಧಿ ಇದೆ ಎಂದು ಮಾಡುವ ಕಮ್ಯೂನಿಸ್ಟ್ ವಿರೋಧಿ ಅಪಪ್ರಚಾರವನ್ನು ಪರಿಣಾಮಕಾರಿಯಾಗಿ ಬಹಿರಂಗಗೊಳಿಸಿದೆ.

ಕಮ್ಯೂನಿಸ್ಟ್ ಪಾರ್ಟಿ ಮತ್ತು ಅದರ ಸರಕಾರವು ತಾವು ಘಟನೆಯ ಚೌಕಟ್ಟಿನಲ್ಲಿ ದುಡಿಯುವುದಾಗಿ ಘೋಷಿಸಿದಾಗ, ಘಟನೆಯಡಿಯಲ್ಲಿ ಕೆಲಸ ಮಾಡುವುದಷ್ಟೇ ಅಲ್ಲದೆ, ಅದರ ನಿಜವಾದ ಭಾವನೆಗಳ ಅನುವಾಗಿ ಕೆಲಸ ಮಾಡುವರೆಂಬುದನ್ನು ಇದು ತೋರಿಸಿ ಕೊಟ್ಟಿದೆ.

ಇದು ಒಂದು ಬಹು ಮುಖ್ಯವಾದ ಅಂಶ. ದೇಶವನ್ನು ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟೇತರರು ಎಂದು ವಿಭಾಗಿಸುವುದು ತಪ್ಪು ಎಂಬುದನ್ನು ಜನತೆ ಅರಿಯಲು ಸಹಾಯಕವಾಗುತ್ತದೆ. ಅದು ಸಮಾಜವಾದೀ ಭಾವನೆಯುಳ್ಳ ಎಲ್ಲ ಇತರ ಪಕ್ಷಗಳೂ ತಮ್ಮ ಕಮ್ಯೂನಿಸ್ಟ್ ವಿರೋಧಿ ತಪ್ಪು ಕಲ್ಪನೆಗಳನ್ನು ಬಿಡಲು ಮತ್ತು ಒಂದೇ ರಾಷ್ಟ್ರೀಯ ಗುರಿಗಾಗಿ ದುಡಿಯಲು ಒಂದು ಗೂಡಲು ಸಹಾಯಕವಾಗುತ್ತದೆ.

"ಕಮ್ಯೂನಿಸ್ಟರು ಒಂದು ವರ್ಷಕಾಲ ಒಂದು ರಾಜ್ಯದಲ್ಲಿದ್ದುದನ್ನು ನೀವು ಕಂಡಿಲ್ಲವೆ? ಅವರು ಅಧಿಕಾರಕ್ಕೆ ಬಂದರೆ ಏನಾಗುತ್ತದೆ ಎಂದು ಕಲ್ಪಿಸಿಕೊಂಡಿದ್ದುದು ನಿಜವಾಯಿತೆ ಅಥವಾ ಸುಳ್ಳಾಯಿತೆ?" ಎಂದು ಕಮ್ಯೂನಿಸ್ಟ್ ವಿರೋಧಿಗಳನ್ನು ಪ್ರಶ್ನಿಸಿದಲ್ಲಿ ಅವರು ನಿರುತ್ತರರಾಗುತ್ತಾರೆ.

ಕೇಂದ್ರದಲ್ಲಿ ಅಧಿಕಾರ

ಅವರು ಈಗ ಈ ರೀತಿ ಹೇಳಬಹುದು:

"ಅಖಿಲ ಭಾರತ ಘಟನೆಯಡಿಯಲ್ಲಿ ನಿರ್ಬಂಧವಾಗಿ ಒಂದು ರಾಜ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಅಧಿಕಾರಕ್ಕೆ ಬರುವುದು ಮತ್ತು ಕೇಂದ್ರದಲ್ಲಿರುವ ಕಮ್ಯೂನಿಸ್ಟೇತರ ಸರಕಾರದ ನೇತೃತ್ವದಲ್ಲಿರುವುದು ಒಂದು ಅಂಶ. ಕೇಂದ್ರದಲ್ಲಿಯೇ ಕಮ್ಯೂನಿಸ್ಟರು ಅಧಿಕಾರಕ್ಕೆ ಬರುವುದು ಇನ್ನೊಂದು ವಿಷಯ. ಕಮ್ಯೂನಿಸ್ಟರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದೇ, ಆದರೆ ಆಗ ನಮ್ಮ ಊಹೆಗಳೆಲ್ಲವೂ ನಿಜವಾಗುವುದು".

ನಮ್ಮ ಉತ್ತರ ಅದಕ್ಕೆ ಹೀಗಿದೆ: "ಕಮ್ಯೂನಿಸ್ಟರಾದ ನಾವು ನಮ್ಮ ಪಕ್ಷವೇ ಕೇಂದ್ರದಲ್ಲಿಯಾಗಲೀ ರಾಜ್ಯಗಳಲ್ಲಾಗಲೀ ಅಧಿಕಾರಕ್ಕೆ ಬರಬೇಕೆಂದು ಅಪೇಕ್ಷಿಸುವುದಿಲ್ಲ; ನಮ್ಮ ಗುರಿಯು ಐಕ್ಯರಂಗದಿಂದ ಅಧಿಕಾರಕ್ಕೆ ಬರುವುದಾಗಿದೆ ಅಥವಾ ನೀವು ಹೇಳುವಂತೆ ಸಮಾಜವಾದಿ ಗುರಿಯನ್ನು ಒಪ್ಪುವ ಮತ್ತು ಅದಕ್ಕಾಗಿ ದುಡಿಯಲು ಆಸಕ್ತಿಯುಳ್ಳ ಎಲ್ಲ ಪಕ್ಷಗಳೂ ಮತ್ತು ವ್ಯಕ್ತಿಗಳ ಸಮ್ಮಿಶ್ರ ಸರಕಾರ ಸ್ಥಾಪಿಸುವುದು ನಮ್ಮ ಗುರಿಯಾಗಿದೆ. ಕಮ್ಯೂನಿಸ್ಟ್ ಪಾರ್ಟಿ, ಪ್ರಜಾಸೋಷಲಿಸ್ಟ್‌ಪಕ್ಷ, ಕ್ರಾಂತಿಕಾರಿ ಸೋಷಲಿಸ್ಟ್‌ಪಕ್ಷ ಮತ್ತು ಸ್ವತಂತ್ರರನ್ನೊಳಗೊಂಡ ಸಮ್ಮಿಶ್ರ ಸರಕಾರ ಸ್ಥಾಪಿಸುವ ಉದ್ದಿಶ್ಯದಿಂದ ನಾವು ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ದುಡಿದೆವು ಕೇರಳದಲ್ಲೂ ಮತ್ತು ಇನ್ನಿತರ ಕಡೆಗಳಲ್ಲೂ ನಾವು ಇನ್ನೂ ಇದನ್ನೇ ಬಯಸುತ್ತಿದ್ದೇವೆ.

"ಬಹುತೇಕ ಕಾಂಗ್ರೆಸ್ ಸದಸ್ಯರೂ ಕೂಡ ದೇಶದಲ್ಲಿ ಸಮಾಜವಾದೀ ಮನೋವೃತ್ತಿಯುಳ್ಳ ಎಲ್ಲರ ಸಮ್ಮಿಶ್ರ ಸರಕಾರದ ಅಗತ್ಯತೆಯನ್ನು ಅರಿತುಕೊಳ್ಳುವರೆಂದೂ ಹಾಗೂ ಅಂಥ ಐಕ್ಯರಂಗವನ್ನು ಸೇರುವರೆಂದೂ ನಾವು ಭಾವಿಸುತ್ತೇವೆ. ಕಮ್ಯೂನಿಸ್ಟರನ್ನು ಮತ್ತು ಕಾಂಗ್ರೆಸ್ಸಿನವರ ಸಮೂಹವನ್ನು ಒಳಗೊಂಡ ಅಂಥ ಸಮ್ಮಿಶ್ರ ಸರಕಾರವು, ಇಂದು ಕಮ್ಯೂನಿಸ್ಟ್ ವಿರೋಧಿಗಳು ಕಮ್ಯೂನಿಸ್ಟರು ಈ ರೀತಿ ಮಾಡುತ್ತಾರೆ, ಆ ರೀತಿ ಮಾಡುತ್ತಾರೆ ಎಂದು ಆರೋಪಿಸುತ್ತಿರುವಂತೆ, ಆಗದಿರಲು ಸಾಧ್ಯವಾಗುತ್ತದೆ".



ಇ. ಎಂ. ಎಸ್. ನಂಬೂದ್ರಿಪಾದ್

ಇರುವ ವ್ಯತ್ಯಾಸವೇನು?

ಅಂಥ ಸಮ್ಮಿಶ್ರ ಸರಕಾರವನ್ನು ಸ್ಥಾಪಿಸಲು ಮಾಡಲಾಗಿರುವ ಎಲ್ಲ ಸೂಚನೆಗಳನ್ನೂ ಸಹ, ಕಮ್ಯೂನಿಸ್ಟರು ದೇಶದ ಹಿತದೃಷ್ಟಿಯನ್ನು ನೋಡುವುದಿಲ್ಲವಾದ್ದರಿಂದ ಅವರನ್ನು ಇತರರೊಂದಿಗೆ ಸಮ್ಮಿಶ್ರ ಸರಕಾರದಲ್ಲಿ ಸೇರಿಸಲಾಗುವುದಿಲ್ಲ ಎಂದು ತಳ್ಳಿಹಾಕಲಾಗಿದೆ. ಒಂದು ವರ್ಷದ ಅಧಿಕಾರಾವಧಿಯಲ್ಲಿ ನಮ್ಮ ಸರಕಾರದ ಕಾರ್ಯಗಳು ಈ ಒಂದು ಭಾವನೆಯನ್ನು ಯಶಸ್ವಿಯಾಗಿ ಮುರಿದಿದೆ.

ಇದು ಇನ್ನೊಂದು ಪ್ರಶ್ನೆಗೆಡೆ ಕೊಡುತ್ತದೆ. ಅನೇಕರು ಹೇಳುವಂತೆ ಕಮ್ಯೂನಿಸ್ಟ್ ಸರಕಾರವು ಇತರ ಸರಕಾರಗಳಂತೆಯೇ ಇದೆ, ಅದನ್ನು ಬೇರೆಯಾಗಿ ನೋಡುವುದು ಸಾಧ್ಯವಿಲ್ಲ, ಅಂದರೆ, ಹಿಂದಿನ ಸರಕಾರಗಳ ಆಡಳಿತೆಯಲ್ಲಿದ್ದಂತೆ ಕಮ್ಯೂನಿಸ್ಟ್ ಸರಕಾರದ ಆಡಳಿತೆಯಲ್ಲಿಯೂ ಸಹ ಜನತೆಯ ಜೀವನ ಸ್ಥಿತಿಯು ಹಾಗೆಯೇ ಇದೆ?

ಕಳೆದ ಒಂದು ವರ್ಷದ ಅಧಿಕಾರವಧಿಯಲ್ಲಿ ನಮ್ಮ ಸರಕಾರ ತೆಗೆದುಕೊಂಡಿರು

ಆಡಳಿತೆಯ ಒಂದು ವರ್ಷ

ಇ. ಎಂ. ಎಸ್. ನಂಬೂದಿರಿಪಾದ್

ವ ವಿಶಿಷ್ಟ ಕ್ರಮಗಳು ಮೇಲಿನ ಪ್ರಶ್ನೆಯ ವಿಷಯದಲ್ಲಿ ಮಹತ್ವವಾಗಿದೆ. ಸರಕಾರದ ಈ ಕ್ರಮಗಳು ಯಾವ ರೀತಿಯದ್ದಾಗಿದೆ ಯೆಂದರೆ ಘಟನೆಯನ್ನು ಅಕ್ಷರಶಃ, ಸತ್ವಶಃ, ಅನುಸರಿಸಿ ಅದು ಕೆಲವು ನೀತಿಗಳನ್ನು ಪಾಲಿಸಿದೆ. ಅದು ತೋರಿಕೆಗೆ ಇತರ ಪಕ್ಷಗಳ ನೀತಿಗಳು ಮತ್ತು ಕಾರ್ಯಕ್ರಮಗಳ ದೃಷ್ಟಿಯಲ್ಲಿ ಅತ್ಯಲ್ಪವಾಗಿ ಕಂಡರೂ, ಸ್ವಭಾವದಲ್ಲಿ ಬೇರೆಯಾಗಿದೆ.

ಉದಾಹರಣೆಗೆ: ಭೂಸುಧಾರಣೆಗಳನ್ನು ತೆಗೆದುಕೊಳ್ಳೋಣ. ಈ ವಿಷಯದಲ್ಲಿ ಕಾಂಗ್ರೆಸಿಗಿಂತ ನಾವೇನು ಬೇರೆಯಲ್ಲ ಎಂದು ನಮ್ಮ ಟೀಕಾಕಾರರು ಹೇಳಬಹುದು, ಯಾಕೆಂದರೆ ನಾವು ನಮ್ಮ ಭೂಸುಧಾರಣಾ ಶಾಸನದ ಸಲಹೆಗಳನ್ನು ಕಾಂಗ್ರೆಸ್ ಭೂಸುಧಾರಣಾ ಸಮಿತಿ ಮತ್ತು ಅಖಿಲ ಭಾರತ ಯೋಜನಾ ಆಯೋಗದ "ಭೂಸುಧಾರಣಾ ಮಂಡಲಿ"ಯ ಸಲಹೆಗಳ ಆಧಾರದ ಮೇಲೆ ರೂಪಿಸಿದ್ದೇವೆ.

ಆದರೆ, ಕಾಂಗ್ರೆಸ್ ಭೂಸುಧಾರಣೆ ಸಮಿತಿಯ ವರದಿ ಹತ್ತು ವರ್ಷದ ಹಿಂದೆ ಮತ್ತು ಭೂಸುಧಾರಣಾ ಮಂಡಲಿಯ ವರದಿಯು ಮೂರು ವರ್ಷದ ಹಿಂದೆ ಬಂದಿದ್ದರೂ ಸಹ ಅನೇಕ ರಾಜ್ಯ ಸರಕಾರಗಳು ಇದನ್ನು ಜಾರಿಗೊಳಿಸಲಿಲ್ಲ ಎಂಬಂಶವನ್ನು ಗಮನದಲ್ಲಿರಿಸಿಕೊಳ್ಳುವುದು ಅಗತ್ಯ. ಯೋಜನಾ ಆಯೋಗದ ಮತ್ತು ಕೇಂದ್ರ ಸರಕಾರದ ನಾಯಕರು ರಾಜ್ಯ ಸರಕಾರಗಳ ಈ ನಡವಳಿಕೆಯ ಬಗ್ಗೆ ಬಹಳ ಟೀಕೆ ಮಾಡಿದ್ದಾರೆ.

ಈ ಒಂದು ಹಿನ್ನೆಲೆಯಲ್ಲಿ ಈ ರಾಜ್ಯದಲ್ಲಿ ನಮ್ಮ ಸರಕಾರವು ಅಧಿಕಾರಕ್ಕೆ ಬಂದಿತು, ಮತ್ತು ಒಂದಿಗೆ ಈ ಕ್ರಮಗಳನ್ನು ತೆಗೆದುಕೊಂಡಿತು :

- ಸಮಗ್ರವಾದ ಭೂಶಾಸನವನ್ನು ತಯಾರಿಸುವ ಉದ್ದೇಶ್ಯದಿಂದ ಎಲ್ಲ ರೀತಿಯಲ್ಲಿಯೂ ಹೊಲದಿಂದ ರೈತನನ್ನು ಹೊರದೂಡುವುದನ್ನು ತಪ್ಪಿಸಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು :

- ಸಾಲದಿಂದ ಪರಿತಪಿಸುತ್ತಿರುವ ರೈತನಿಗೆ ಪರಿಹಾರ ಒದಗಿಸಲು ಸಾಲದ ಕುರಿತ ಮಸೂದೆಯನ್ನು ತಂದಿತು.

- ವಿಶಿಷ್ಟ ಬಗೆಯ ಪಾಳೆಯಗಾರೀ ಭೂಮಾಲಿಕತ್ವವನ್ನು ಕೊನೆಗಾಣಿಸಲು ಅನುವಾಗುವಂತೆ ಭೂಸಂಬಂಧ ಮಸೂದೆಯೊಂದನ್ನು ತಂದಿತು.

- ಮತ್ತು ಕೊನೆಯದಾಗಿ, ಭೂಸಂಬಂಧಿಕ ಮಸೂದೆಯನ್ನು ತಯಾರಿಸಲಾಯಿತು ಮತ್ತು ಶಾಸನ ಸಭೆಯಲ್ಲಿ ಮಂಡಿಸಲಾಯಿತು (ಈ ಮಸೂದೆಯು, ಭಾರತದಲ್ಲಿ ಎಲ್ಲ ರಾಜ್ಯಗಳಿಗೂ ಮೊದಲು ಕಾಂಗ್ರೆಸ್ ಭೂಸುಧಾರಣಾ ಸಮಿತಿ ಮತ್ತು ಯೋಜನಾ ಆಯೋಗದ ಭೂಸುಧಾರಣಾ ಮಂಡಲಿಯ ಸಲಹೆಗಳನ್ನು ಕಾರ್ಯಗತಗೊಳಿಸಲು ಯತ್ನಿಸುವುದಾಗಿದೆ)

ಭೂಮಾಲಿಕ–ಗೇಣಿದಾರನ ಸಂಬಂಧದಲ್ಲಿ ಸುಧಾರಣೆ ತರಲು ಯತ್ನಿಸುತ್ತಿರುವಾಗಲೇ, ಇತ್ತೀಚೆಗೆ ವ್ಯವಸಾಯ ಕೂಲಿಗಾರರಿಗೆ ಕನಿಷ್ಟ ಕೂಲಿ ನಿಗದಿ ಮಾಡಿರುವುದನ್ನು ಇಲ್ಲಿ ಗಮನಕ್ಕೆ ತರಬೇಕಾಗಿಗೆ.

ಈ ಎರಡು ಕ್ರಮಗಳು (ವ್ಯವಸಾಯ ಕೂಲಿಗಾರನಿಗೆ ಅನುಕೂಲ ಮಾಡಿಕೊಡುವ ಕ್ರಮಗಳು) ವಿಶಾಲವಾದ ಬಡ ಗ್ರಾಮಸ್ತ ಜನಸಮೂಹಗಳನ್ನು ಶೋಷಕರಿಂದ ಬಿಡುಗಡೆಯಾಗಲು ಸಹಾಯ ನೀಡಲು ಮತ್ತು ಅವರು ತಮ್ಮ ಕಾಲಮೇಲೆ ತಾವು ನಿಲ್ಲುವಂತಾಗಲು ಮತ್ತು ಭಾರತ ರಾಷ್ಟ್ರವು ಸಮಾಜವಾದೀ ಗುರಿಯನ್ನು ಮುಟ್ಟಲು ಮುನ್ನಡೆಯಲು ಸಮೃದ್ಧ ನವಕೇರಳವನ್ನು ನಿರ್ಮಿಸಲು ರಾಷ್ಟ್ರದೊಂದಿಗೆ ಒಂದುಗೂಡಿ ದುಡಿಯಲು ಸಾಧ್ಯವಾಗುವಂತೆ ಮಾಡುವುದಾಗಿದೆ.

ಈ ಕ್ರಮಗಳ ರಚನೆ ಮತ್ತು ಅದನ್ನು ಕಾರ್ಯಗತಗೊಳಿಸುವುದು ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ತಂದಿವೆ. ಉದಾಹರಣೆಗೆ, ಸಣ್ಣ ಭೂಮಾಲಿಕರು ಮತ್ತು ಅವರ ಗೇಣಿದಾರರ ನಡುವೆ ಸಂಬಂಧ, ಮಧ್ಯವರ್ತಿ ಮತ್ತು ಬಡರೈತ ಮತ್ತು ವ್ಯವಸಾಯ ಕೂಲಿಗಾರರು, ಇತ್ಯಾದಿ,ಗಳ ನಡುವೆಯ ಸಂಬಂಧ. ಈ ಸಮಸ್ಯೆಗಳು ಸಾಮಾನ್ಯವಾಗಿ ತೀವ್ರ ಪರಿಸ್ಥಿತಿಗೆ ಎಡೆಗೊಡುತ್ತದೆ, ಇದರಲ್ಲಿ ಪ್ರತಿ ವರ್ಗದ ಅಥವ ವಿಭಾಗಗಳ ಜನತೆಯು ತಮ್ಮಲ್ಲಿಲ್ಲದುದನ್ನು ಪಡೆದುಕೊಳ್ಳಲು ಯತ್ನಿಸುತ್ತಾರೆ. ಇದು ಕೆಲ ಸಂದರ್ಭಗಳಲ್ಲಿ ಘರ್ಷಣೆಗೂ ಎಡೆಕೊಡುತ್ತದೆ.

ಈ ತೀವ್ರ ಪರಿಸ್ಥಿತಿ ಮತ್ತು ಘರ್ಷಣೆಗಳು ಕೆಲವು ಬಾರಿ ಜಾತೀಯ ಅಥವಾ ಮತೀಯ ರೂಪವನ್ನು ತಾಳುತ್ತವೆ; ಅನೇಕ ಸಂದರ್ಭಗಳಲ್ಲಿ ಅವು ರಾಜಕೀಯ ಮತ್ತು ಪಕ್ಷಗಳ ತಿಕ್ಕಾಟಗಳ ಹಿನ್ನಲೆಯಲ್ಲಿ ಕಾಣಿಸಿಕೊಳ್ಳುತ್ತವೆ.

ಈ ತೀವ್ರ ಪರಿಸ್ಥಿತಿ ಮತ್ತು ಘರ್ಷಣೆಗಳು ಸಾಮಾನ್ಯವಾಗಿ ನ್ಯಾಯ ಮತ್ತು ಶಿಸ್ತು ಪಾಲನೆಯ ಸಮಸ್ಯೆಗೆ ಎಡೆಗೊಡುತ್ತದೆ. ಹಿಂದಿನ ಆಡಳಿತಗಳಲ್ಲಿ ಈ ಸಮಸ್ಯೆಗಳು ಎದ್ದಾಗ, ಅವು ಗೇಣಿದಾರರ ಮತ್ತು ವ್ಯವಸಾಯ ಕೂಲಿಗಾರರ ವಿರುದ್ಧವಾಗಿ ಒಂದೆಡೆ ಶೋಷಕವರ್ಗಗಳು ಒಂದು ಗೂಡುವುದಕ್ಕೆ ಮತ್ತು ಇನ್ನೊಂದೆಡೆ ಪೋಲೀಸು ಮತ್ತಿತರ ಪ್ರಭುತ್ವದ ಅಂಗಗಳನ್ನು ಬಳಸುವುದಕ್ಕೆ ಎಡೆಕೊಡುತ್ತಿತ್ತು.

ಆದರೆ ನಮ್ಮ ಸರಕಾರವು ಅಂಥ ಸೇರ್ಪಡೆಯಾಗದಂತೆ ನೋಡಿಕೊಳ್ಳುತ್ತದೆ. ಪ್ರಭುತ್ವದ ಅಂಗದ ಕಾರ್ಯವು ಈ ವರ್ಗ ಅಥವಾ ಆ ವರ್ಗದ, ಅಥವಾ ವರ್ಗಗಳ ಕೂಟದ ಸಹಾಯಕ್ಕಾಗಿ ಅಲ್ಲ, ಆದರೆ ಅವರ ನಡುವಣ ಪರಸ್ಪರ ಸಂಬಂಧಗಳು ಘರ್ಷಣೆಗೆ ಎಡೆಕೊಟ್ಟು, ಬಹಿರಂಗವಾಗಿ ಹೊಡೆದಾಟದ ರೂಪಕ್ಕೆ ಎಡೆಕೊಡದಂತೆ ನೋಡಿಕೊಳ್ಳುವುದು ಮತ್ತು ಈ ಬಗೆಯಲ್ಲಿ ಶಾಂತಿಯುತವಾದ ರೀತಿಯಲ್ಲಿ ಒಂದು ಬಗೆಯ ಸಾಮಾಜಿಕ ಆರ್ಥಿಕ ಸ್ಥಿತಿಯಿಂದ ಇನ್ನೊಂದಕ್ಕೆ ಬದಲಾವಣೆ ತರುವುದಾಗಿದೆ.

ಅನೇಕ ಆತಂಕಗಳನ್ನು ಹೊಂದಿದ್ದು ನಮ್ಮ ಸರಕಾರವು ಪೋಲೀಸು ಮತ್ತು ಇತರ ಪ್ರಭುತ್ವದ ಅಂಗಗಳ ಮೇಲಿನ ಪಾತ್ರವನ್ನು ನೂರಕ್ಕೆ ನೂರಂಶದಷ್ಟು ಭರವಸೆಯಿಂದ ನಿರ್ವಹಿಸುವಂತೆ ಮಾಡುವುದು ಸುಲಭವಲ್ಲ. ತಲೆಮಾರುಗಳಿಂದ ಪೋಲೀಸರಿಗೆ ಕೊಡಲಾಗಿರುವ ತರಬೇತಿ, ಆಚರಣೆಯಲ್ಲಿರುವ ಅವರಿಗಾಗಿರುವ ನಿಯಮಗಳು ಮತ್ತು ಇತರ ನಿಬಂಧನೆಗಳು ಮೇಲಿನ ನೀತಿಯನ್ನು ಸತ್ವಶಃ ಕಾರ್ಯಗತಗೊಳಿಸಲು ದುಸ್ಸಾಧ್ಯವಾಗುತ್ತದೆ. ಈ ನೀತಿಯನ್ನು ಆದಷ್ಟು ಮಟ್ಟಿಗೆ ಜಾರಿಗೊಳಿಸಲು ನಾವು ಯತ್ನಿಸುತ್ತಿದ್ದೇವೆ ಎಂದು ನಾನು ಹೇಳಬಲ್ಲೆ.

ಭೂಸಂಬಂಧಗಳಲ್ಲಿ ಎಷ್ಟು ನಿಜವೋ ಅಷ್ಟೇ ಇದು ಕಾರ್ಮಿಕ–ಬಂಡವಳಿಗಳ ಸಂಬಂಧದ ಕ್ಷೇತ್ರದಲ್ಲಿ ನಮ್ಮ ಚಟುವಟಿಕೆಯು ಅಷ್ಟೇ ನಿಜವಾಗಿದೆ. ಕಾರ್ಮಿಕರ ವಿರೋಧವಾಗಿ ಬಂಡವಳಿಗರ ಪರವಾಗಿ ಪೋಲೀಸು ಮತ್ತು ಪ್ರಭುತ್ವದ ಇತರ ಯಂತ್ರವು ಪ್ರವೇಶಿಸುವಂತಿಲ್ಲ, ಆದರೆ ಈ ಎರಡು ವರ್ಗಗಳ ನಡುವೆ ಉದ್ರಿಕ್ತತೆ ಮತ್ತು ಘರ್ಷಣೆಯು ಶಾಂತಿಭಂಗ ತರುವ ಘಟನೆಗಳಿಗೆ ಎಡೆಗೊಡದಂತೆ ನೋಡಿಕೊಳ್ಳುವುದು ಮತ್ತು ತನ್ಮೂಲಕ ವಿವಾದಗಳ ಬಗ್ಗೆ ಶಾಂತಿಯುತವಾದ ಪರಿಹಾರ ನೀಡುವಂಥ ಭರವಸೆಯನ್ನೀಯುವುದು ಅದರ ಪಾತ್ರವಾಗಿದೆ.

ಕಾರ್ಮಿಕರ ಪರವಾಗಿ ಬಂಡವಳಿಗರ ವಿರೋಧವಾಗಿ ಪ್ರವೇಶಿಸುವುದೂ ಪೋಲಿಸರ ಕರ್ತವ್ಯವಲ್ಲ; ಕಾರ್ಮಿಕ ವರ್ಗವು ತನ್ನ ಕೇಳಿಕೆಗಳನ್ನು ತನ್ನ ಶಕ್ತಿ ಮತ್ತು ಐಕ್ಯತೆಯಿಂದ ಮತ್ತು ಇತರೇ ಶ್ರಮಜೀವಿಗಳ, ಸಾರ್ವಜನಿಕರ ಸೌಹಾರ್ದದಿಂದ ಪಡೆದುಕೊಳ್ಳಬೇಕು. ಪೋಲೀಸರು ಯಾರ ಪರವಾಗಿಯೂ ಪ್ರವೇಶಿಸದಿದ್ದಲ್ಲಿ ದುಡಿಯುವ ಜನತೆಯು ಈ ಐಕ್ಯತೆ ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.

ಈ ಹೊಸ ನೀತಿಯನ್ನು ಪ್ರಥಮವಾಗಿ ಘೋಷಿಸಿದಾಗ, ಪೋಲೀಸರನ್ನು ನಿಷ್ಕ್ರಿಯಗೊಳಿಸಲಾಗುತ್ತಿದೆ, ನ್ಯಾಯ ಮತ್ತು ಶಿಸ್ತು ಪರಿಪಾಲನೆಯಲ್ಲಿ ಅವರ ಪಾತ್ರವನ್ನು, ಅಧಿಕಾರವನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ವಿರೋಧಿಸಲಾಯಿತು. ಪೋಲೀಸು ಶಕ್ತಿಯನ್ನು "ನಿಃಸ್ಸತ್ವ"ಗೊಳಿಸಲಾಗಿದೆ ಮತ್ತು ಅದನ್ನು "ನಿರರ್ಥಕ"ಗೊಳಿಸಲಾಗಿದೆ, ತತ್ಪರಿಣಾಮವಾಗಿ "ಅಭದ್ರತೆ" ಯುಂಟಾಗುತ್ತಿದೆ ಎಂದು ಆರೋಪಿಸಲಾಯಿತು.

ಇದು ನಿರಾಧಾರವಾದ ಆರೋಪವೆಂದು ಅನುಭವವೇ ತೋರಿಸಿಕೊಟ್ಟಿದೆ. ಶಾಂತಿ ಭಂಗವಾದಾಗ ಪೋಲೀಸರು ದೃಢವಾಗಿ ವರ್ತಿಸಿದ್ದಾರೆಂಬುದು ಈಗ ವ್ಯಕ್ತವಾಗಿದೆ. ವಿಖ್ಯಾತವಾಗಿರುವ 144ನೇ ಸೆಕ್ಷನ್ ಮತ್ತು 107ನೇ ಸೆಕ್ಷನ್‌ಗಳನ್ನು ಅನಿವಾರ್ಯವಾದಾಗ ಮಾತ್ರ ಬಳಸಲಾಗಿದೆ. ಲಾಠಿ ಚಾರ್ಜ್ ಮತ್ತು ಪೋಲೀಸರನ್ನು ಬಳಸುವುದನ್ನು ಸಂಪೂರ್ಣವಾಗಿ ತಪ್ಪಿಸಲಾಗಿಲ್ಲ, ಅದನ್ನು ಅತ್ಯಂತ ಅನಿವಾರ್ಯವಾಗಿ ಬಂದ ಸಂದರ್ಭದಲ್ಲಿ ಮಾತ್ರ ಬಳಸಲಾಗಿದೆ.

ಆದ್ದರಿಂದಾಗಿ ಪೋಲೀಸು "ನಿಷ್ಕ್ರಿಯ"ವಾಗಿದೆ ಅಥವಾ "ನಿರರ್ಥಕ"ವಾಗಿದೆ ಎನ್ನುವುದರಲ್ಲಿ ಅರ್ಥವಿಲ್ಲ. ಆದರೆ ಒಂದಂಶವೇನೆಂದರೆ ಶೋಷಿತ ವರ್ಗಗಳ ಮೇಲೆ ಶಕ್ತಿಯನ್ನು ದಬ್ಬಾಳಿಕೆ ಅಸ್ತ್ರವಾಗಿ ಬಳಸಿಲ್ಲ, ಆದರೆ ಅದನ್ನು ಸರಕಾರವು ಶಾಂತಿ ಅಸ್ತ್ರವನ್ನಾಗಿ, ಮುಖ್ಯವಾದ ಸಾಮಾಜಿಕ ಆರ್ಥಿಕ ಬದಲಾವಣೆಗಳನ್ನು ಶಾಂತ ರೀತಿಯಲ್ಲಿ ತರಲು ಬಳಸುತ್ತಿದೆ.

ನಮ್ಮ ಸಾಧನೆಗಳನ್ನು ಕುರಿತು ನಾನು ಕೊಚ್ಚಿಕೊಳ್ಳಬಯಸುವುದಿಲ್ಲ. ಆದರೆ ಭೂಸಂಬಂಧ ಮತ್ತು ಕಾರ್ಮಿಕರ ಪ್ರಶ್ನೆಗಳ ಬಗ್ಗೆ ನಮ್ಮ ಸರಕಾರವು ವರ್ತಿಸಿರುವಂತೆ ಬೇರಾವ ಸರಕಾರವೂ ವರ್ತಿಸಿಲ್ಲ ಎಂದು ಹೇಳಬಯಸುತ್ತೇನೆ. ದುಡಿಯುವ ಜನಸಮೂಹವು ಹೊಸ ನಂಬಿಕೆಯ ಭಾವವನ್ನು ಮತ್ತು ಶಕ್ತಿಯನ್ನೂ ಪಡೆಯುವುದರಿಂದ, ಅದೇ ಸಮಯದಲ್ಲಿ ಈ ವಿಶ್ವಾಸ ಮತ್ತು ಶಕ್ತಿ ಮತ್ತು ಐಕ್ಯತೆಯು ಕಾರ್ಮಿಕ ಜನತೆಯನ್ನು ಅನೇಕ ಸ್ಥಳೀಯ ಉದ್ರಿಕ್ತ ಪಂಸ್ಥಿತಿಗಳು ಮತ್ತು ಘರ್ಷಣೆಗಳಿಗೆ ತಂದರೂ, ಈ ಉದ್ರಿಕ್ತತೆ ಮತ್ತು ಘರ್ಷಣೆಗಳು ರಾಜ್ಯದಲ್ಲಿ ನ್ಯಾಯ ಮತ್ತು ಶಿಸ್ತು ಪರಿಪಾಲನೆಯ ಸ್ಥಿತಿಯನ್ನು ಭಂಗಗೊಳಿಸುವುದರಲ್ಲಿ ಕೊನೆಗೊಂಡಿಲ್ಲ. ಉದಾಹರಣೆಗೆ, ಅನೇಕ ಕಾರ್ಮಿಕ ವಿವಾದಗಳು ಮತ್ತು ವರ್ಗ ತಿಕ್ಕಾಟದ ಇತರ ರೂಪಗಳೂ ಉದ್ಭವಿಸಿವೆ, ಆದರೆ ನಮ್ಮ ರಾಜ್ಯದಲ್ಲಿ ಈ ವರ್ಷದಲ್ಲಿ ಲಾಠಿ ಚಾರ್ಜು ಮತ್ತಿತರ ದಬ್ಬಾಳಿಕೆ ಕ್ರಮಗಳು ತೀರ ಅಲ್ಪ ಸಂಖ್ಯೆಯದಾಗಿದೆ.

ಆದ್ದರಿಂದಾಗಿ, ನಾವು ಐದು ವರ್ಷಗಳು ಆಡಳಿತ ನಡೆಸಲು ಅವಕಾಶ ಕೊಟ್ಟಿದ್ದೇ ಆದರೆ, ಅಧಿಕಾರಾವಧಿಯ ಅಂತ್ಯದಲ್ಲಿ ಇತರ ಎಲ್ಲ ರಾಜ್ಯಗಳಿಗಿಂತಲೂ ಹೆಚ್ಚಾಗಿ, ಇತರ ರಾಜ್ಯಗಳಿಗಿಂತಲೂ ಅತ್ಯಲ್ಪವಾದ ಬಲಾತ್ಕಾರದ ಅಸ್ತ್ರವನ್ನು ಬಳಸಿ ಸಾಮಾಜಿಕ–ಆರ್ಥಿಕ ಪದ್ಧತಿಯಲ್ಲಿ ಬದಲಾವಣೆಯನ್ನು ತಂದಿದ್ದೇವೆಂದು ತೋರಿಸಿಕೊಡುತ್ತೇವೆಂದು ಘೋಷಿಸಬಯಸುತ್ತೇನೆ. ಈ ಆಶ್ವಾಸನೆಗೆ ಕಳೆದ ಒಂದು ವರ್ಷದಲ್ಲಿ ನಮ್ಮ ಆಳ್ವಿಕೆಯ ಯಶಸ್ವಿ ಪೂರೈಕೆಯೇ ಸಾಕಷ್ಟು ಋಜುವಾತಾಗಿದೆ.

'ಜನಶಕ್ತಿ'

ಪ್ರಗತಿಶೀಲ ಕನ್ನಡ ವಾರಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಚಂದಾ ವಿವರ :

ವಾರ್ಷಿಕ ಚಂದಾ ರೂ. 6—00

ಅರ್ಧ ವಾರ್ಷಿಕ ರೂ. 3—00

ಬಿಡಿ ಪ್ರತಿ 13 ನಯಾ ಪೈಸಾ

ಅಂತರರಾಷ್ಟ್ರೀಯ

ಅಮೆರಿಕ ನ್ಯೂಕ್ಲಿಯರ್ ಅಸ್ತ್ರಪ್ರಯೋಗ ನಿಲ್ಲಿಸುವುದೇ ?

ಕಳೆದವಾರ ಸೋವಿಯತ್ ಯೂನಿಯನ್ ಏಕಪಕ್ಷೀಯವಾಗಿ ನ್ಯೂಕ್ಲಿಯರ್ ಅಸ್ತ್ರ ಪ್ರಯೋಗಗಳನ್ನು ನಿಲ್ಲಿಸುವುದಾಗಿ ಘೋಷಣೆ ಮಾಡಿರುವುದು ಪಶ್ಚಿಮ ರಾಷ್ಟ್ರಗಳನ್ನು ಗೊಂದಲಕ್ಕೀಡುಮಾಡಿದೆ. ಈ ಘೋಷಣೆಯಿಂದಾಗಿ ರಷ್ಯವು ಅಂತರ ರಾಷ್ಟ್ರೀಯ ರಾಯಭಾರಿ ವ್ಯವಹಾರದಲ್ಲಿ ಪಶ್ಚಿಮ ರಾಷ್ಟ್ರಗಳನ್ನು ಹಿಂದೆ ಸರಿಸಿ, ಮುಂದೆ ಧಾವಿಸಿದೆ ಎಂದು ರಾಜಕೀಯ ವಲನಗಳಲ್ಲಿ ಹಬ್ಬಿದೆ.

ರಷ್ಯದ ಪ್ರಧಾನಿ ನಿಕಿಟ ಕೃಶ್ಚೇವ್‌ರವರು ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್ ಮತ್ತು ಅಮೆರಿಕದ ಅಧ್ಯಕ್ಷ ಐಸನ್‌ಹೋವರ್ ರವರುಗಳಿಗೆ ರಷ್ಯವನ್ನನುಸರಿಸಿ ಅಮೆರಿಕಾ ಮತ್ತು ಬ್ರಿಟನ್‌ಗಳೂ ಸಹ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗಗನನ್ನು ನಿಲ್ಲಿಸಬೇಕೆಂದು ಕೇಳಿಕೊಂಡಿದ್ದಾರೆ. ಪಶ್ಚಿಮ ರಾಷ್ಟ್ರಗಳು ಇದಕ್ಕೆ ಗಮನಕೊಡದೆ, ಪ್ರಯೋಗವನ್ನು ಮುಂದುವರಿಸಿದಲ್ಲಿ ರಷ್ಯವೂ ಸಹ ರಕ್ಷಣೆಯ ಹಿತದೃಷ್ಟಿಯಿಂದ ಪ್ರಯೋಗಗಳನ್ನು ಆರಂಭಿಸಬೇಕಾದೀತು ಎಂಬುದನ್ನು ಈ ಪತ್ರದಲ್ಲಿ ಕೃಶ್ಚೇವ್‌ರವರು ನಿವೇದಿಸಿದ್ದಾರೆ.

ಅಮೆರಿಕದಲ್ಲಿ ಈ ವಿಷಯದಲ್ಲಿ ಕಳವಳ ಉಂಟಾಗಿದೆ. ಮುಂದಿನ ತಿಂಗಳಲ್ಲಿ ಅಮೆರಿಕವು ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗಗಳನ್ನು ನಡೆಸಲಿದೆ. ಈ ಪ್ರಯೋಗದ ವಿರುದ್ಧ ತೀವ್ರ ಪ್ರತಿಭಟನೆಗಳು ಅಮೆರಿಕದಲ್ಲೇ ಬರುತ್ತಿವೆ. ರಷ್ಯವು ಏಕ ಪಕ್ಷೀಯವಾಗಿ ನ್ಯೂಕ್ಲಿಯರ್ ಅಸ್ತ್ರ ಪ್ರಯೋಗವನ್ನು ನಿಲ್ಲಿಸಿರುವುದು ಕೇವಲ ಬೂಟಾಟಿಕೆ ಎಂದು ಹೇಳಿ ತಳ್ಳಿಹಾಕುವುದು ಅಮೆರಿಕದ ನಾಯಕರಿಗೆ ಸುಲಭವಾಗಿಲ್ಲ. ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ ಮೇಲಿಂದ ಮೇಲೆ ರಷ್ಯವು ಅಮೆರಿಕವನ್ನು ಹಿಂದೆ ಸರಿಸಿ ಮುಂದೆ ಹೋಗಿರುವುದು, ಡಲ್ಲೆಸ್ ವಿದೇಶಾಂಗ ನೀತಿಯ ಪರಾಭವವೆಂದು ಪರಿಗಣಿಸಲಾಗುತ್ತಿದೆ. ಅಮೆರಿಕದ ಹಿಂಬಾಲಕ ರಾಷ್ಟ್ರಗಳಾದ ಬ್ರಿಟನ್ ಮತ್ತು ಫ್ರಾನ್ಸ್‌ಗಳಲ್ಲಿ ರಷ್ಯದ ಘೋಷಣೆ ತೀವ್ರವಾದ ಪರಿಣಾಮವನ್ನುಂಟುಮಾಡಿದೆ. ಅಮೇರಿಕವು ಸಹ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವುದಾಗಿ ಘೋಷಿಸುವುದೇ ಎಂಬ ಪ್ರಶ್ನೆ ಎದ್ದಿದೆ. ಆದರೆ ಐಸನ್‌ಹೋವರ್‌ರವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಹಿಂದೆಯೇ ಅಮೆರಿಕವು ಈ ವಿಷಯ ಯೋಚಿಸಿತ್ತೆಂದೂ ಆದರೆ ಅಂಥ ನಿರ್ಧಾರ ಒಳ್ಳೆಯದಲ್ಲವೆಂದು ಮಾಡಲಿಲ್ಲವೆಂದೂ ತಿಳಿಸಿದ್ದಾರೆ. ಅಂದರೆ ಈಗಲೂ ಸಹ ಅದೇ ಭಾವನೆ ಅನುಸರಿಸುವಂತಿವೆ. ಆದರೆ ವಿಶ್ವದಲ್ಲಿ ಈ ಬಗ್ಗೆ ಒತ್ತಾಯವಿರುವುದರಿಂದ ಅಮೆರಿಕವು ಯೋಚಿಸಬೇಕಾದ ಪ್ರಮೇಯ ಬಂದೊದಗಿದೆ.

ಅಗ್ರ ರಾಷ್ಟ್ರಗಳಲ್ಲಿ ಬಹಳ ದುರ್ಬಲವಾಗಿರುವ ಫ್ರೆಂಚ್ ಸರಕಾರವು ಈಗ ಗೊಂದಲದಲ್ಲಿದೆ. ಫ್ರಾನ್ಸ್‌ನಲ್ಲಿ ರಾಜಕೀಯ ವೃತ್ತಗಳಲ್ಲಿ ಕಳವಳವೇ ಉಂಟಾಗಿದೆ. ಫ್ರಾನ್ಸ್‌ನಲ್ಲಿ ಇನ್ನೂ ನ್ಯೂಕ್ಲಿಯರ್ ಅಸ್ತ್ರಗಳನ್ನು ತಯಾರಿಸದಿದ್ದರೂ ಸಹ, ಅದು ಅಮೇರಿಕ ಮತ್ತು ಬ್ರಿಟನ್‌ಗಳೊಡಗೂಡಿ ಆದಕ್ಕೆ ಬೆಂಬಲವನ್ನು ಕೊಡುತ್ತಿದೆ. ರಷ್ಯದ ವಿದೇಶಾಂಗ ಸಚಿವ ಗ್ರೋಮಿಕೋರವರು ಮಾತನಾಡುತ್ತ "ಫ್ರಾನ್ಸಿನಲ್ಲಿ ಇಂದು ಅಧಿಕಾರದಲ್ಲಿರುವವರು, ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗ ನಡೆಸುವುದರಿಂದ ತಮ್ಮ ರಾಷ್ಟ್ರ ಹಿತಸಾಧನೆಯಾಗುತ್ತಿದೆ ಎಂದು ತಿಳಿದಿದ್ದಾರೆ" ಎಂದು ಹೇಳಿರುವುದು, ಫ್ರೆಂಚ್ ರಾಜಕೀಯ ವಲಯಗಳಲ್ಲಿ ಗೊಂದಲವೆದ್ದಿದೆ.

ಬ್ರಿಟನ್ನಿನ ಜನತೆ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ವಿರೋಧಿಸಿದ್ದಾರೆ, ಅದಕ್ಕಾಗಿ ಚಳವಳಿ ನಡೆಸುತ್ತಿದ್ದಾರೆ. ರಷ್ಯವು ಏಕಪಕ್ಷೀಯವಾಗಿ ಪ್ರಯೋಗವನ್ನು ನಿಲ್ಲಿಸಿದುದು, ಜನತೆಯ ಚಳವಳಿಗೆ ಪುಟಗೊಟ್ಟಂತಾಗಿದೆ. ಲಂಡನ್ನಿನಲ್ಲಿ ಇತ್ತೀಚೆಗೆ ಐದು ಸಾವಿರ ಬ್ರಿಟಿಷ್ ಪ್ರಜೆಗಳು 40 ಮೈಲಿ ದೂರ ನಡೆದು ಹೋಗಿ ನ್ಯೂಕ್ಲಿಯರ್ ಅಸ್ತ್ರಗಳ ಬೆಳವಣಿಗೆಯನ್ನು ವಿರೋಧಿಸಿ ಲಂಡನ್ನಿನಲ್ಲಿರುವ ಟ್ರಫಾಲ್ಗರ್ ಚೌಕದಲ್ಲಿ ಪ್ರತಿಭಟನಾ ಪ್ರದರ್ಶನ ಮತ್ತು ಸಭೆಯನ್ನು ನಡೆಸಿದುದೇ ಅಲ್ಲದೆ, ಚೆರ್ಕ್‌ಟೈರ್‌ನಲ್ಲಿರುವ ಪರಮಾಣು ಸಂಶೋಧನಾ ಕೇಂದ್ರದ ಮುಂದೆ ಪ್ರದರ್ಶನ ನಡೆಸಿದ್ದಾರೆ. ಇದರಿಂದ ಬ್ರಿಟಿಷ್ ಸಾರ್ವಜನಿಕ ಒತ್ತಾಯವು ಯಾವ ಕಡೆಗಿದೆ ಎಂಬುದು ತಿಳಿಯುತ್ತದೆ.

ವಿಶ್ವದ ಶಾಂತಿಪ್ರಿಯ ರಾಷ್ಟ್ರಗಳು ರಷ್ಯದ ಘೋಷಣೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿವೆ, ಅಮೇರಿಕಾ ಮತ್ತು ಬ್ರಿಟಗಳೂ ಸಹ ರಷ್ಯಾದ ಮಾರ್ಗವನ್ನನುಸರಿಸಬೇಕೆಂದು ಒತ್ತಾಯಪಡಿಸಿವೆ. ಶಾಂತಿಪ್ರಿಯ ಜನತೆಯು ರಷ್ಯದ ಘೋಷಣೆಯನ್ನು ಸ್ವಾಗತಿಸುತ್ತ, ಅಣು ಅಸ್ತ್ರಗಳ ಸಂಪೂರ್ಣ ನಿಷೇಧಕ್ಕಾಗಿ ಚಳವಳಿಯನ್ನು ತೀವ್ರಗೊಳಿಸಬೇಕೆಂದು ಕರೆ ಇತ್ತಿದೆ. ಅಮೇರಿಕಾ ಬ್ರಿಟನ್ ದೇಶಗಳು ವಿಶ್ವದ ಜನಕೋಟಿಯ ಆಕಾಂಕ್ಷೆಗೆ ಮಣಿದು ಪ್ರಯೋಗವನ್ನು ನಿಲ್ಲಿಸುವುದೇ ?

ಪಾಲ್ ರೋಬ್ಸನ್‌ರಿಗೆ ನಮ್ಮ ಶುಭಾಶಯ

ಜಗದ್ವಿಖ್ಯಾತ ನೀಗ್ರೋ ಸಂಗೀತಗಾರ ಪಾಲ್ ರೋಬ್ಸನ್‌ರವರ 60ನೆಯ ಜನ್ಮದಿನವನ್ನು ಏಪ್ರಿಲ್ 9ರಂದು ವಿಶ್ವದ ನಾನಾ ಭಾಗಗಳಲ್ಲಿ ಪ್ರಜಾಪ್ರಭುತ್ವವಾದಿಗಳು, ಕಲಾಕಾರರು, ಕಲಾಭಿಮಾನಿಗಳು ಆಚರಿಸಿದ್ದಾರೆ. ಅವರ ಈ 60ನೆ ಹುಟ್ಟುಹಬ್ಬದಂದು ನಾವು ನಮ್ಮ ಶುಭಾಶಯಗಳನ್ನು ಅವರಿಗೆ ಅರ್ಪಿಸಿ, ಇನ್ನೂ ಹೆಚ್ಚು ಕಾಲ ಅವರು ಜನತೆಯ ಸೇವೆಯನ್ನು ಮಾಡುವಂತಾಗಲಿ ಎಂದು ಹಾರೈಸುತ್ತೇವೆ.

ಪಾಲ್ ರೋಬ್ಸನ್‌ರವರು ಕೇವಲ ಸಂಗೀತಗಾರರು ಮಾತ್ರವೇ ಅಲ್ಲ, ಸ್ವಾತಂತ್ರ್ಯಕ್ಕಾಗಿ, ನೀಗ್ರೋ ಜನರ ಸ್ವಾತಂತ್ರ್ಯಕ್ಕಾಗಿ, ವಿಶ್ವಶಾಂತಿಗಾಗಿ, ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಯೋಧರೂ ಆಗಿದ್ದಾರೆ. ಅಮೇರಿಕದ ಆಡಳಿತಗಾರರು ಇಂಥ ಮಹಾ ಕಲಾಕಾರನ, ಸ್ವಾತಂತ್ರ್ಯ ಯೋಧನ ಚಲನವಲನಗಳ ಮೇಲೆ ಪ್ರತಿಬಂಧಕವನ್ನು ಹಾಕಿದೆ. ಮೆಕಾರ್ಥಿ ಕಾಲದಲ್ಲಿ ರೋಬ್ಸನ್ನರನ್ನು ಕಮ್ಯೂನಿಸ್ಟೆಂದು ಪರಿಗಣಿಸಿ, ಇಲ್ಲದ ಕಿರುಕುಳವನ್ನು ಕೊಡಲಾಗಿದ್ದಿತು. ರೋಬ್ಸನ್ 1934ರಲ್ಲಿ ಸೋವಿಯತ್ ಯೂನಿಯನ್ನಿಗೆ ಭೇಟಿ ಇತ್ತಿದ್ದರು. ಸೋವಿಯತ್ ಜನತೆಯು ಸಮಾಜವಾದೀ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಉತ್ಸಾಹದಿಂದ ದುಡಿಯುತ್ತಿದ್ದುದನ್ನು ಕಂಡು ತಮ್ಮ ಮೆಚ್ಚುಗೆಯನ್ನು ವ್ಯಕ್ತಗೊಳಿಸಿದರು. ನಿಜವಾದ ಸ್ವಾತಂತ್ರ್ಯ ಎಲ್ಲ ಜನಾಂಗಗಳಿಗೂ ಸೋವಿಯತ್ ಯೂನಿಯನ್ನಿನಲ್ಲಿ ಇದೆ ಎಂದು ಅರಿತರು. ದ್ವಿತೀಯ ಮಹಾ ಯುದ್ಧದ ನಂತರದಲ್ಲಿ ವಿಶ್ವಶಾಂತಿಯನ್ನು ಶಾಶ್ವತವಾಗಿ ಕಾಪಾಡಲು ಸೋವಿಯತ್ ಯೂನಿಯನ್ ತೆಗೆದುಕೊಂಡಿರುವ ಕ್ರಮಗಳನ್ನು ರೋಬ್ಸನ್ ಎತ್ತಿಹಿಡಿದಿದ್ದಾರೆ. ಇವರ ಸೋವಿಯತ್ ಪರವಾದ ಅಭಿಪ್ರಾಯ ಮತ್ತು ನೀಗ್ರೋ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಟ ಇದೇ ಅವರನ್ನು ಅಮೇರಿಕದ ಆಡಳಿತೆಯ ದೃಷ್ಟಿಯಲ್ಲಿ "ಕಮ್ಯೂನಿಸ್ಟ್" ಆಗಿ ಮಾಡಿದೆ.

ರೋಬ್ಸನ್ ಆಡಳಿತದ ವಕ್ರದೃಷ್ಟಿಯಿದ್ದರೂ ಧೃತಿಗೆಡದೆ ತಮ್ಮ ಹೋರಾಟ ಸಾಗಿಸುತ್ತಿದ್ದಾರೆ. ಅವರ ಹೋರಾಟ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಕಳೆದ ಹಲವು ವರ್ಷಗಳಿಂದ ಅವರು ಅಮೇರಿಕದಿಂದ ಇತರ ದೇಶಗಳಿಗೆ ಭೇಟಿ ಕೊಡಲು ಯತ್ನಿಸುತ್ತಿದ್ದಾರೆ. ಆದರೆ ಅಮೇರಿಕದ ಆಡಳಿತಗಾರರು ಅವರಿಗೆ ರಹದಾರಿಯನ್ನು ನಿರಾಕರಿಸಿದ್ದಾರೆ.

ರೋಬ್ಸನ್ನರ 60ನೆಯ ವರ್ಧಂತಿಯುನ್ನು ಭಾರತದಲ್ಲಿ ನಾನಾ ಕಡೆಗಳಲ್ಲಿ ಆಚರಿಸಲಾಗಿದೆ. ಮುಂಬಯಿ, ದೆಹಲಿ, ಕಲ್ಕತ್ತಾಗಳಲ್ಲಿ ಪ್ರಮುಖ ರಾಜಕಾರಣಿಗಳು, ಕಲಾಕಾರರುಗಳನ್ನೊಳಗೊಂಡ ಸಮಿತಿಗಳನ್ನು ರಚಿಸಿ, ವರ್ಧಂತಿಯನ್ನು ಆಚರಿಸಲಾಗಿದೆ. ಭಾರತದ ಪ್ರಧಾನಿ ಪಂಡಿತ ನೆಹರೂರವರು ರೋಬ್ಸನ್ನರು ಮಹಾ ಕಲಾಕಾರರೆಂದೂ ಸ್ವಾತಂತ್ರ್ಯ ಯೋಧರೆಂದೂ ಘೋಷಿಸಿದ್ದಾರೆ. ಅಮೇರಿಕಾ ಸರಕಾರದ ನಾಯಕರುಗಳು, ರೋಬ್ಸನ್ನರ ವರ್ಧಂತಿಯು ವಿಶ್ವದ ವಿವಿಧ ಭಾಗಗಳಲ್ಲಿ ಸಂಭ್ರಮದಿಂದ ಆಚರಿಸುವುದನ್ನು ಕಂಡು ಈ ರೀತಿ ಹೇಳಿದೆ: "ಕಮ್ಯೂನಿಸ್ಟರು ರೋಬ್ಸನ್ನರನ್ನು ರಾಜಕೀಯ ಹುತಾತ್ಮರನ್ನಾಗಿ ಮಾಡಲು ಪ್ರಚಾರಕ್ಕಾಗಿ ಬಳಸುತ್ತಿದ್ದಾರೆ." ಇದು ಸಾಮ್ರಾಜ್ಯಶಾಹಿಗಳ ಪ್ರತಿಕ್ರಿಯೆ, ಅದು ಒಬ್ಬ ನಿಸ್ವಾರ್ಥ ಕಲಾಕಾರನ ಮೇಲೆ ಆಗಿದೆ.

ಪೋಲೀಸು ಖಾತೆಯ ಆಡಳಿತೆ ಬಗ್ಗೆ ಉಗ್ರ ಟೀಕೆ

(೩ನೇ ಪುಟದಿಂದ)

ಯು ಯಾವ ಮಾರ್ಗದಲ್ಲಿ ಹೋಗುತ್ತಿದೆ ಎಂಬುದಕ್ಕೆ ನಿದರ್ಶನವಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ಏರ್ಪಟ್ಟಿರುವ ಬಿಕ್ಕಟ್ಟನ್ನು ಕುರಿತು ಪ್ರಸ್ತಾಪಿಸುತ್ತ ಈ ಬಿಕ್ಕಟ್ಟಿನ ಪ್ರತಿಕ್ರಿಯೆ ಸರಕಾರದ ನೀತಿಗಳಲ್ಲಿ ಕಂಡುಬಂದಿದೆಯೆಂದು ತಿಳಿಸಿದರು. ಹತ್ತು ವರ್ಷಗಳ ಆಡಳಿತ ನಡೆಸಿದ್ದರೂ ಕಾಂಗ್ರೆಸ್ ಪಕ್ಷ ನೈತಿಕ ನಾಯಕತ್ವವನ್ನು ಕಟ್ಟುವುದರಲ್ಲಿ ವಿಫಲವಾಗಿದೆ. ಪಂಚವಾರ್ಷಿಕ ಯೋಜನೆಗೆ ಎಲ್ಲ ಪಕ್ಷಗಳ ಬೆಂಬಲವಿದ್ದರೂ ಕಾಂಗ್ರೆಸ್ ಅದನ್ನು ಉಪಯೋಗಿಸಿಕೊಂಡು ಜನತೆಯ ಸಹಕಾರ ಪಡೆದಿಲ್ಲ. ಇಂಥ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಕಾಂಗ್ರೆಸ್ಸು ಬಿಕ್ಕಟ್ಟಿನಲ್ಲಿರುವುದರಿಂದ ಸಾಧ್ಯವಾಗದೇ ಇದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಸ್ಥಾಪಿತವಾಗಿರುವ ಸಂಗೀತ ನಾಟಕ ಅಕ್ಯಾಡೆಮಿಯ ಬಗ್ಗೆ ಮಾತನಾಡುತ್ತ, ನರಸಿಂಹನ್‌ರವರು ಸಂಗೀತ ನಾಟಕ ಅಕ್ಯಾಡೆಮಿಗೆ ಈಗ ಇರುವ ಅಧಿಕೃತ ಅಧ್ಯಕ್ಷರಿಗೆ ಬದಲು ಖಾಸಗೀ ಅಧ್ಯಕ್ಷರಿರಬೇಕೆಂದೂ, ಎಷ್ಟೋ ವೇಳೆ ಕೋರಂ ಇಲ್ಲದೆ ಇದರ ಸಭೆಯೇ ನಡೆದಿಲ್ಲವೆಂದೂ, ಗ್ರಾಂಟುಗಳನ್ನು ಸಹ ಸರಿಯಾಗಿ ಒದಗಿಸಲಾಗುತ್ತಿಲ್ಲವೆಂದೂ ತಿಳಿಸಿ, ಈ ಸಂಸ್ಥೆಯನ್ನು ಪುನರ್ರಚಿಸಿ, ತೃಪ್ತಿಕರವಾಗಿ ಕೆಲಸ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಪೋಲೀಸರ ವರ್ತನೆ ಬದಲಾಗಬೇಕು

ಬೆಂಗಳೂರಿನಲ್ಲಿ ಮುನಿಯಮ್ಮನ ಸಾವು ಪೋಲೀಸು ಕಸ್ಟಡಿಯಲ್ಲಿನ ಪರಿಣಾಮವಾಗಿ ಸಂಭವಿಸಿದ್ದು, ಬಿಜಾಪುರದಲ್ಲಿ ಪೋಲೀಸು ಕಸ್ಟಡಿಯಲ್ಲೇ ಒಬ್ಬನು ಸತ್ತಿರುವುದೂ ಇಂಥ ಘಟನೆಗಳು ನಡೆದಿವೆ. ಇಂಥಾ ಘಟನೆಗಳು ನಡೆಯದಂತೆ ಸರಕಾರ ಕ್ರಮ ತೆಗೆದುಕೊಳ್ಳಬೇಕು. ಪೋಲೀಸರನ್ನು ಕೈಗಾರಿಕಾ ವಿವಾದಗಳಲ್ಲಿ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸಲು ಬಳಸುವುದನ್ನು ನಿಲ್ಲಿಸಬೇಕು. ಕೇರಳದಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈಗ ನಾವು ಸಮಾಜವಾದೀ ಸಮಾಜ ನಿರ್ಮಾಣ, ಸಹಕಾರ ಕಾಮನ್‌ವೆಲ್ತ್ ಎಂದೆಲ್ಲ ಹೇಳುತ್ತೇವೆ. ಆದರಿಂದಾಗಿ ಪೋಲೀಸರು ಹಿಂದಿನಂತೆ ವರ್ತಿಸಲು ಸಾಧ್ಯವಿಲ್ಲ. ಅವರ ಹಿಂದಿನ ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ. ಪೋಲೀಸರು ತಮ್ಮ ಮನೋದೃಷ್ಟಿಯನ್ನು ಬದಲಿಸಬೇಕು. ಸಾರ್ವಜನಿಕರೊಂದಿಗೆ ವಿನಯದಿಂದ ವರ್ತಿಸಬೇಕು ಎಂದು ತಿಳಿಸಿದರು.

ಅಂದವಾದ ಮುದ್ರಣ ಕೆಲಸಕ್ಕೆ

ಜನಶಕ್ತಿ

ಮುದ್ರಣಾಲಯಕ್ಕೆ ಸಂದರ್ಶನವೀಯಿರಿ

ದೊಡ್ಡಬಳ್ಳಾಪುರದಲ್ಲಿ ನೀರಿನ ಅಭಾವ

ಈ ಊರಿನ ಪ್ರಜಾಸಂಖ್ಯೆ, ಮೂವತ್ತು ಸಹಸ್ರಕ್ಕೆ ಏರಿದೆ. ಕೈಗಾರಿಕಾ ಕ್ಷೇತ್ರವಾದ್ದರಿಂದ, ದಿನೇ ದಿನೇ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಾ, ಜನಸಂದಣಿ ಕೂಡ ಜಾಸ್ತಿಯಾಗುತ್ತಲಿದೆ. ಇದಕ್ಕೆ ಅನುಗುಣವಾಗಿ ಪೌರಸಭೆಯವರು ಅಭಿವೃದ್ಧಿ ಕಾರ್ಯಗಳನ್ನ ಕೈಗೊಳ್ಳುತ್ತಿಲ್ಲ.

ಈಗ್ಗೆ ಕಾಲು ಶತಮಾನಕ್ಕೆ ಹಿಂದೆ ಊರಿನ ಪ್ರಜಾಸಂಖ್ಯೆ ಕೇವಲ ಹದಿನೈದು ಸಹಸ್ರವಿದ್ದಾಗ ಏನು ನೀರಿನ ಏರ್ಪಾಡು ಮಾಡಿದ್ದರು. ಅದೇ ಇಂದಿಗೂ ಮುಂದುವರಿಯುತ್ತಿದೆ. ಸರ್ಕಾರದವರೇನೋ ಈ ಟವನಿನ ನೀರು ಸರಬರಾಜಿಗೆ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ದೊಡ್ಡ ನೀರಿನ ಟ್ಯಾಂಕೊಂದನ್ನು ಕಟ್ಟಲು ಪ್ರಾರಂಭವಾಗಿ ಆರು ವರ್ಷಗಳಾಗುತ್ತಾ ಬಂತು. ಎರಡು ವರ್ಷಗಳಿಂದ ನೀರಿನ ಸ್ಪರ್ಶವಿಲ್ಲದೆ, ಟ್ಯಾಂಕು ಊರಿನ ಮಧ್ಯೆ ಒಣಗುತ್ತಿದೆ. ದೊಡ್ಡ ಸೈಜು ಪೈಪುಗಳು ಊರಿನ ಅನೇಕ ಭಾಗಗಳಲ್ಲಿ ಜೋಡಿಸಿಟ್ಟಿದ್ದಾರೆ, ಕೆಲವನ್ನು ಭೂಮಿಯಲ್ಲೂ ಹಾಕಿಯಾಗಿದೆ ಅಂತೂ ಜನಕ್ಕೆ ನೀರು ಮಾತ್ರ ಇಲ್ಲ. ನಮ್ಮ ಪುರಸಭೆಯ ಅಧ್ಯಕ್ಷರಾದ ಶ್ರೀ. ಎಂ. ಟ. ಶ್ರೀಕಂಠಯ್ಯನವರು ಈಗ್ಗೆ ಎರಡು ವರ್ಷಗಳ ಹಿಂದೆ ನಡೆದ ಮುನಿಸಿಪಲ್ ಚುನಾವಣಾ ಕಾಲದಲ್ಲಿ ಘೋಷಣೆಯೊಂದನ್ನು ಹೊರಡಿಸಿದ್ದರು ಅದರಲ್ಲಿ ಅವರ ಹಿಂದಿನ ಎರಡು ವರ್ಷದ ಅಧ್ಯಕ್ಷಗಿರಿಯಲ್ಲಿ ಮಾಡಿದ ಅಸಂಖ್ಯಾತ ಅಭಿವೃದ್ಧಿ ಕಾರ್ಯಗಳ ವಿವರಯಿತ್ತು ಆ ಪೈಕಿ ಊರಿಗೆ ನಾಲ್ಕುವರೆ ವರ್ಷದ ನೀರಿನ ಯೋಜನೆಗೆ ಇವರು ಪಟ್ಟ ಶ್ರಮ ಪ್ರಮುಖಸ್ಥಾನ ಹೊಂದಿತ್ತು. ಇವರ ಅನೇಕ ಹಿಂಬಾಲಕರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಇಂಥಾ ಅದ್ಭುತಕಾರ್ಯಗಳನ್ನು ಸಾಧಿಸಿರುವ ಶ್ರೀ ಎಂ. ಟ. ಶ್ರೀಕಂಠಯ್ಯನವರನ್ನು ಮತ್ತೆ ಅಧ್ಯಕ್ಷ ಸ್ಥಾನಕ್ಕೆ ಏರಿಸುವ ಸಲುವಾಗಿ ನಾವು ಉಮೇದುವಾರರಾಗಿ ನಿಂತಿದ್ದೇವೆ. ನಮಗೆ ನಿಮ್ಮ ಮತ ಕೊಟ್ಟು ಊರಿನ ಹಿತರಕ್ಷಿಸಿರೆಂದು ಬೊಬ್ಬೆ ಹಾಕಿದರು. ಇನ್ನು ಒಂದು ವಾರದೊಳಗೆ ನೀರಿನ ವಸತಿಯನ್ನು ಪೂರೈಸಿ ಊರಿಗೆ ಯಥೇಚ್ಛವಾಗಿ ನೀರನ್ನು ಒದಗಿಸುವುದಾಗಿ ಜನತೆಗೆ ಆಶ್ವಾಸನವಿತ್ತರು ಎರಡು ವರ್ಷಗಳು ಕಳೆದವು. ನಾಲ್ಕಾರು ಮಂದಿ ಅಧ್ಯಕ್ಷರ ಶ್ರೀಮಂತ ಹಿತೈಷಿಗಳ ಮನೆ ಬಳಕೆಗೆ ಹಾಗೂ ಬಣ್ಣದ ಫ್ಯಾಕ್ಟರಿಗಳಿಗೆ ಯಥೇಚ್ಛವಾಗಿ ನೀರು ಒದಗಿಸಲಾಯ್ತು.

ಸಾರ್ವಜನಿಕರು, ಮನೆಗಳಿಗೆ ಹಾಕಿಸಿರುವ, ಕೊಳಾಯಿ, ಮತ್ತು ಪೈಪುಗಳು, ಅನೇಕ ವರ್ಷಗಳಿಂದ, ನೀರಿನ ಮುಖ ಕಾಣದೆ, ತುಕ್ಕು ಹಿಡಿಯುತ್ತಿವೆ. ಟ್ಯಾಂಕನ್ನ ನೋಡಿಕೊಂಡು, ಇನ್ನೂ ಕೆಲವು ಜನರು, ಮನೆ ನಲ್ಲಿಗಳನ್ನ ಡಿಸ್‌ಕನೆಕ್ಟ್ ಮಾಡಿಸದೆ, ದಂಡದ ಛಾರ್ಜನ್ನ ಮುನಿಸಿಪಾಲಿಟಿಗೆ ತೆರುತ್ತಲಿದ್ದಾರೆ, ನೀರಿಗಾಗಿ ಊರಿನ ಜನರ ಹಾಹಾಕಾರ ಹೇಳತೀರದು. ನಮ್ಮ ಊರಿಗೆ ಸರ್ಕಾರದವರು, ನೀರಿನ ಯೋಜನೆ ಪೂರೈಸಲು ಹಣ ಮಂಜೂರು ಮಾಡಿದಾಗಲೆ ಇನ್ನೂ ಅನೇಕ ಟವನ್‌ಗಳಿಗೂ ಮಾಡಿದ್ದಾರೆ. ಅಲ್ಲಿ ಎಲ್ಲಾ ಕೆಲಸ ಕಾರ್ಯಗಳೂ ಪೂರೈಸಿ, ಎರಡು ಮೂರು ವರ್ಷಗಳಿಂದಲೂ ಜನರು ಯಥೇಚ್ಛವಾದ ನೀರಿನ ಸೌಕರ್ಯವನ್ನು, ಹೊಂದುತ್ತಲಿದ್ದಾರೆ. ಆದರೆ ನಮ್ಮ ಟವನಿನಲ್ಲಿ ಮಾತ್ರ ಹೀಗಾಗಲು ಕಾರಣವಾದರೂ ಏನು? ಅರ್ಥವಾಗದಂತಾಗಿದೆ. ಈಗಲಾದರೂ ಪುರಸಭೆಯವರು ಕೂಡ್ಲೆ ಇದಕ್ಕೆ ಗಮನ ಕೊಡುವರೇ?

ಕೇರಳ ದಿನಾಚರಣೆ

ಭದ್ರಾವತಿ

ಭದ್ರಾವತಿ ಕಮ್ಯೂನಿಸ್ಟ್ ಪಾರ್ಟಿ ಆಫೀಸಿನಲ್ಲಿ ಇಂದು ಕೇರಳ ದಿನಾಚರಣೆಯನ್ನು ಕಾಗದದ ಕಾರ್ಖಾನೆ ಕೆಲಸಗಾರರಾದ ಕಾಮ್ರೇಡ್ ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯ್ತು. ಸಭೆಗೆ ಕಾಗದ ಕಾರ್ಖಾನೆ ಹಾಗೂ ಕಬ್ಬಿಣದ ಕಾರ್ಖಾನೆಯ ನೌಕರರು ಹಾಜರಿದ್ದರು.

ಕಾಮ್ರೇಡ್ ಕೆ. ಶೇಶಗಿರಿಶಾಸ್ತ್ರಿಗಳು ಮಾತಾಡುತ್ತಾ ಕಮ್ಯೂನಿಸ್ಟ್ ಸರ್ಕಾರವು ಕಳೆದ ಒಂದು ವರ್ಷದಲ್ಲಿ ಕೈಗೊಂಡಿರುವ ಪ್ರಜಾಹಿತ ಕೆಲಸಗಳು ಜನತೆಯ ಮೆಚ್ಚಿಗೆ ಪಡೆದಿರುವುದಲ್ಲದೆ, ಕಾಂಗ್ರೆಸ್ ಮಂತ್ರಿಮಂಡಳವಿರುವ ಇತರ ಪ್ರಾಂತಗಳಿಗೆ ಒಂದು ಸವಾಲ್ ಹಾಕಿದಂತಿದೆ. ಪ್ರಜಾಪ್ರಭುತ್ವದ ಕೂಲೆ ಕಾಂಗ್ರೆಸ್ ಸರ್ಕಾರದಲ್ಲಿ ನಡೆದು, ಪ್ರಜಾಪ್ರಭುತ್ವದ ಜನನವನ್ನು ಹತ್ತು ವರ್ಷಗಳ ನಂತರ ಕೇರಳದಲ್ಲಿ ನೋಡಲು ಸೌಲಭ್ಯವಾಗಿದೆ ಎಂದು ತಿಳಿಸಿದರು.

ಕಾಮ್ರೇಡ್ ಸೂರ್ಯನಾರಯಣ್‌ರವರು ಕೇರಳ ಸರ್ಕಾರ ಸಾಧಿಸಿರುವ ಪ್ರಗತಿ ಹಾಗೂ ಕಾರ್ಮಿಕ ಕ್ಷೇತ್ರದಲ್ಲಿ ಅವರು ಕೈಗೊಂಡಿರುವ ಪ್ರಗತಿಪರ ಕಾರ್ಯಕ್ರಮವನ್ನು ವಿವರಿಸಿ, ನಂಬೂದರಿ ಸರ್ಕಾರದ ಒಂದು ವರ್ಷದ ಯಶಸ್ವಿ ಕಾರ್ಯದಿಂದ ಇತರ ಪ್ರಾಂತ್ಯದವರು ತಮ್ಮ ಸೋಲನ್ನು ನಿರ್ವಾಹವಿಲ್ಲದೆ ಒಪ್ಪುವ ಸ್ಥಿತಿಗೆ ಬಂದಿದ್ದಾರೆಂದು ತಿಳಿಸಿದರು.

ನಂತರ ಕಾಮ್ರೇಡ್ ನಟರಾಜ್, ವೆಂಕಟಪ್ಪನವರು ಮಾತಾಡಿದರು.

ಕಮ್ಯೂನಿಸ್ಟ್ ಪಾರ್ಟಿ ಸೆಕ್ರೆಟೆರಿ ಚಂದುಕುಟ್ಟಿಯವರು ಕಳೆದ ಒಂದು ವರ್ಷದಲ್ಲಿ ಕೇರಳದಲ್ಲಿ ವಿರೋಧ ಪಕ್ಷದ ಹೇಯವರ್ತನೆಯನ್ನು ಖಂಡಿಸಿ ಮತ್ತು ಕೇರಳ ಕಮ್ಯೂನಿಸ್ಟ್ ಸರ್ಕಾರದ ಯಶಸ್ವೀ ಕಾರ್ಯಕ್ರಮಕ್ಕಾಗಿ ನಂಬೂದರಿ ಮಂತ್ರಿ ಮಂಡಳವನ್ನು ಅಭಿನಂದಿಸುವ ಠರಾವನ್ನು ಮಂಡಿಸಿದರು ಇದು ಸರ್ವಾನುಮತದಿಂದ ಅಂಗೀಕೃತವಾಯ್ತು.

ನಂತರ ಅಧ್ಯಕ್ಷತೆ ವಹಿಸಿದ್ದ ಕಾಮ್ರೇಡ್ ಚಂದ್ರಶೇಖರ್‌ರವರು ಮಾತಾಡುತ್ತಾ ಕೇವಲ ಒಂದು ವರ್ಷದಲ್ಲಿ ಅನೇಕ ಪ್ರಗತಿಪರ ಶಾಸನವನ್ನು ಜಾರಿಗೆ ತಂದಿರುವ ಹಾಗೂ ಇಡೀ ಹಿಂದೂಸ್ಥಾನಕ್ಕೇ ಪ್ರಗತಿಪರವಾದ ಭೂಸುಧಾರಣೆಯನ್ನು ಜಾರಿಗೆ ತರಲಿರುವ ನಂಬೂದರೀ ಮಂತ್ರಿಮಂಡಳ ತನ್ನ ಸ್ತುತ್ಯ ಕಾರ್ಯದಿಂದ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿದೆ ಹಾಗೂ ಇಡೀ ಹಿಂದೂಸ್ಥಾನದ ಜನತೆ ಕೇರಳ ಸರ್ಕಾರವನ್ನು ಅದರ ಜನಹಿತ ಕಾರ್ಯಕ್ಕಾಗಿ ಅಭಿನಂದಿಸುತ್ತದೆ ಎಂದು ತಿಳಿಸಿದರು.

ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯ್ತು.

ಬೆಂಗಳೂರು

ಕೇರಳದ ಕಮ್ಯೂನಿಸ್ಟ್ ಸರಕಾರವು ಆಡಳಿತ ವಹಿಸಿ ಏಪ್ರಿಲ್ 5ರಂದು ಒಂದು ವರುಷ ತುಂಬಿತು. ಇದರ ಸ್ಮರಣಾರ್ಥವಾಗಿ ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆಯು ಚಿಕ್ಕಲಾಲ್‌ಬಾಗಿನಲ್ಲಿ ಸಂಜೆ 6ಕ್ಕೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನುಕಮ್ಯೂನಿಸ್ಟ್ ಪಾರ್ಟಿ ಸದಸ್ಯರೂ, ಕಾರ್ಪೋರೇಷನ್ ಸದಸ್ಯರೂ ಆದ ಕಾಂ। ಶ್ರೀರಾಮುಲುರವರು ವಹಿಸಿದ್ದರು. ಪ್ರಾರಂಭದಲ್ಲಿ ಒಂದು ವರುಷಕಾಲ ಯಶಸ್ವಿ ಆಡಳಿತ ನಡೆಸಿದ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ಅಭಿನಂದನೆ ಸಲ್ಲಿಸಲಾಯಿತು.

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಗಳಾದ ಕಾಂ। ಎಸ್. ಸೂರ್ಯನಾರಾಯಣರಾವ್‌ರವರು ಮತ್ತು ಕಾಂ। ಎಂ. ಎಸ್. ರಾಮರಾಯರೂ ಮಾತನಾಡಿ, ಕೇರಳದ ಕಮ್ಯೂನಿಸ್ಟ್ ಆಡಳಿತೆಯ ಒಂದು ವರುಷದ ಸಾಧನೆಗಳನ್ನು ವಿವರಿಸಿದರು.

ಕಮ್ಯೂನಿಸ್ಟರು ಆಡಳಿತೆವಹಿಸಿಕೊಂಡ ನಂತರ ಅಲ್ಲಿಯ ಸರಕಾರ ಕಾರ್ಮಿಕರ, ರೈತರ, ಮಧ್ಯಮವರ್ಗದವರ ಹಾಗೂ ಇತರೇ ಜನವಿಭಾಗದ ಹಿತಗಳನ್ನು ಯಾವ ರೀತಿ ರಕ್ಷಿಸಿದೆ ಎಂಬುದನ್ನು ತಿಳಿಸಿದರು.

ಭೂಸುಧಾರಣೆ, ವಿದ್ಯಾಸುಧಾರಣೆ ಹಿಂದುಳಿದ ಜನವಿಭಾಗದ ಸುಧಾರಣೆ ಮುಂತಾದ ಜನಪ್ರಿಯ ಕೆಲಸಗಳನ್ನು ಕಮ್ಯೂನಿಸ್ಟ್ ಆಡಳಿತೆಯಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗಿದೆಯೆಂದೂ ತಿಳಿಸಿದರು.

ಕೇರಳದ ವಿರೋಧಿ ಪಕ್ಷಗಳಲ್ಲೊಂದಾದ ಕಾಂಗ್ರೆಸ್ ಪಾರ್ಟಿಯು ಮುಸ್ಲಿಮ್ ಲೀಗಿನಂಥ ಜಾತೀಯವಾದೀ ಸಂಸ್ಥೆಗಳೊಡನೆಯೂ ಒಪ್ಪಂದ ಮಾಡಿಕೊಂಡು, ಜನಪ್ರಿಯ ಆಡಳಿತೆ ನಡೆಸುತ್ತಿರುವ ಕಮ್ಯೂನಿಸ್ಟರಿಗೆ ಕಿರುಕುಳ ಕೊಡುತ್ತಿರುವುದು ಸಮಾಜವಾದೀ ಮಾದರಿ ಸಮಾಜ ರಚಿಸುತ್ತೇವೆನ್ನುವವರಿಗೆ ಯೋಗ್ಯವಲ್ಲವೆಂದು ಖಂಡಿಸಿದರು.

ಯಾರು ಎಷ್ಟೇ ಕಿರುಕುಳಗಳನ್ನು ಕೊಟ್ಟರೂ ಜನಹಿತ ರಕ್ಷಿಸುವ ಕಮ್ಯೂನಿಸ್ಟ್ ಸರಕಾರ ಮುಂದುವರಿಯುವುದು ಖಂಡಿತವೆಂದು ತಿಳಿಸಿದರು.

ಕೇರಳ ದಿನಾಚರಣೆಯ ಅಂಗವಾಗಿ ಏಪ್ರಿಲ್ 6ರಂದು ಬೆಳಗ್ಗೆ "ಜನಶಕ್ತಿ" ವಿಶೇಷ ಸಂಚಿಕೆಯನ್ನು ಪಾರ್ಟಿ ಕಾರ್ಯಕರ್ತರು ನಗರದ ಬೀದಿಗಳಲ್ಲಿ ಮಾರಾಟ ಮಾಡಿದರು.

ಓದುಗರ ಓಲೆ

ಸ್ವಾಮಿ,

ಕೋಲಾರ ಟೌನಿನಲ್ಲಿರುವ ನರಸಿಂಹರಾಜ ಸರ್ಕಾರಿ ಆಸ್ಪತ್ರೆಯು ಸ್ಥಾಪಿತವಾದಂದಿನಿಂದ ಬಹಳ ನಿಷ್ಠೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾ ಬಂದಿತ್ತು. ಆದರೆ ಇತ್ತೀಚೆಗೆ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ದೌರ್ಜನ್ಯಗಳು ಹೃದಯ ವಿದ್ರಾವಕವಾಗಿವೆ. ಈಗ ಆಸ್ಪತ್ರೆಯ ಒಳಾಂಗಣದಲ್ಲಿ ಕಾಲಿಡಬೇಕಾದರೆ ಬಾಗಿಲು ಕಾಯುವ ಜವಾನರಿಂದ ಹಿಡಿದು ಕೊನೆ ಘಟ್ಟದ ವರೆಗೂ ಹಣ ಇದ್ದರೆ ಮಾತ್ರ ಒಳಗೆ ಹೋಗಲು ಅಸ್ಪದವಿದೆ ಅದರಲ್ಲಿಯೂ ಒಳಗಡೆ ಕಾಹಿಲೆ ಇರುವವರ ಸ್ಥಿತಿಯಂತೂ ಚಿಂತಾಜನಕವಾಗಿದೆ. ಅವರನ್ನು ಜೈಲುಗಳಲ್ಲಿರುವ ಖೈದಿಗಳಿಗಿಂತಲೂ ಹಿನಾಯವಾಗಿ ಕಾಣುತಿದ್ದಾರೆ. ಅವರಲ್ಲಿ ಹಣವನ್ನು ಕೊಟ್ಟವರಿಗೆ ಸರಿಯಾದ ಔಷದೋಪಚಾರಗಳು ಜರುಗುತ್ತಿವೆ ಇಲ್ಲದವರಿಗೆ ಬರೀ ಔಷಧ ಹೊತ್ತಿಗೆ ಊಟ, ಹಾಸಿಗೆ ಮುಂತಾದುವು ದೊರೆಯುವುದೇ ದುಸ್ತರವಾಗಿದೆ. ಇತ್ತೀಚೆಗೆ ಕಾಹಿಲೆಯಾಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆದವರಿಗೆ ವಾರಕ್ಕೆ ಒಂದೆರಡಾವರ್ತಿ ರಕ್ತ ಪರೀಕ್ಷೆಗೆ ಹಣಕೊಡಬೇಕೆಂದು ಒತ್ತಾಯಪೂರ್ವಕವಾಗಿ ಪ್ರತಿಯೊಬ್ಬರಿಂದ ತಲಾ 0—2—0 ಶುಲ್ಕವನ್ನು ವಸೂಲ್ಮಾಡುತ್ತಿದ್ದಾರೆ. ಇದು ಬಹಳ ವಿಚಿತ್ರವಾದ ಸಂಗತಿಯಾಗಿದೆ. ಯಾವ ಆಸ್ಪತ್ರೆಯಲ್ಲಿಯೇ ಆಗಲಿ ಈ ರೀತಿ ಹಣ ಸೆಳೆಯುವ ಕಾನೂನಿಲ್ಲ. ಅಲ್ಲದೆ ಇಲ್ಲಿಗೆ ಬಂದಿರುವ ಡಾಕ್ಟರುಗಳು ಕಾಹಿಲೆ ಒಂದಿದ್ದರೆ ಔಷಧಿಯೊಂದನ್ನು ಬರೆದು ಕೊಡುತ್ತಾರೆ. ಇವರಿಗೆ ಎಷ್ಟು ಮಾತ್ರ ವೈದ್ಯಕೀಯದ ಗಂಧ ಗೊತ್ತಿದೆಯೋ ಇಲ್ಲವೊ. ಅಲ್ಲದೆ ಈ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರ್‌ರವರು ವರ್ಗವಾಗಿ ಸುಮಾರು 2 ತಿಂಗಳಾಗಿದ್ದರೂ ಇದು ವರೆವಿಗೆ ಆ ಸ್ಥಳಕ್ಕೆ ಬೇರೆ ಯಾರನ್ನೂ ಕಳುಹಿಸಿಲ್ಲ. ಈಗ ಅವರ ಸ್ಥಾನದಲ್ಲಿ ಒಬ್ಬ ಗಂಡಸು ಡಾಕ್ಟರನ್ನು ಡಿ.ಯಂ.ಒ. ರವರು ಹಾಕಿರುತ್ತಾರೆ. ಔಷಧೋಪಚಾರಕ್ಕೆ ಹೋದ ಹೆಂಗಸರು ತಮಗಿರುವ ನಿಜವಾದ ಕಾಹಿಲೆಗಳನ್ನು ಅವರಿಗೆ ತಿಳಿಸಿ ಅವರಿಂದ ಸರಿಯಾದ ಔಷಧೋಪಚಾರಗಳನ್ನು ಪಡೆಯಲು ನಾಚಿಕೆ ಪಟ್ಟು ಬೇರೆ ನೆಪಗಳನ್ನು ಹೇಳಿಕೊಂಡು ಔಷಧಿಗಳನ್ನು ಪಡೆದುಕೊಂಡು ಹೋಗುತ್ತಿರುತ್ತಾರೆ. ಆದ್ದರಿಂದ ಆದಷ್ಟು ಜಾಗ್ರತೆ ಇಲ್ಲಿಗೆ ಒಬ್ಬ ಲೇಡಿ ಡಾಕ್ಟರನ್ನು ಕಳುಹಿಸಬೇಕೆಂದು ಕೋರುತ್ತೇವೆ.

ಅಲ್ಲದೆ ಮೊನ್ನೆ ಸುಮಾರು 4—5 ವರ್ಷಗಳ ಹುಡುಗಿಗೆ ಗಂಟಲಿನಲ್ಲಿ ಎಲುಬಿನ ಚೂರೊಂದು ಸಿಕ್ಕಿಕೊಂಡು ಅದರ ಚಿಕಿತ್ಸೆಗಾಗಿ ಔಟ್‌ಪೇಶೆಂಟ್ ಡಾಕ್ಟರ ಬಳಿ ಹೋದಾಗ ಆತನು ಗಂಟಲಿನಲ್ಲಿ ಏನೂ ಇಲ್ಲವೆಂತಲೂ ಹುಡುಗಿಗೆ ಜ್ವರ ವಿಪರೀತ ಬಂದಿದೆಯೆಂದೂ ಅದಕ್ಕೆ ಔಷಧಿ ಬರೆದು ಕೊಟ್ಟು ಕಳುಹಿಸಿಬಿಟ್ಟರು. ಅಲ್ಲಿಂದ ಅವರು ಮತ್ತೊಬ್ಬ ಡಾಕ್ಟರ ಬಳಿ ಹೋಗಲು ಅವರು ಯಾವುದೋ ಬೇರೊಂದು ಆ

(ಆನೇ ಪುಟ ನೋಡಿ)

ವಿಶೇಷ ಸಮಾಚಾರಗಳು

ಕಲ್ಲಿದ್ದಲು ಗಣಿಗಳಲ್ಲಿ 6000 ಅಪಘಾತಗಳು

ಜನವರಿ 1956ರಿಂದ ಫೆಬ್ರುವರಿ 1958ರ ವರೆಗೆ, ಅಂದರೆ ಎರಡು ವರ್ಷಗಳ ಅವಧಿಯಲ್ಲಿ ಭಾರತದಲ್ಲಿರುವ ಕಲ್ಲಿದ್ದಲು ಗಣಿಗಳಲ್ಲಿ 6,175 ಅಪಘಾತಗಳು ಸಂಭವಿಸಿವೆ ಎಂದು ಭಾರತ ಸರಕಾರದ ಪ್ರಕಟಣೆಯೊಂದು ತಿಳಿಸುತ್ತದೆ. ಈ ಅಪಘಾತದಲ್ಲಿ 662 ಮಂದಿ ಕೆಲಸಗಾರರು ಮರಣ ಹೊಂದಿದ್ದಾರೆ ಮತ್ತು 5,980 ಮಂದಿ ಕೆಲಸಗಾರರಿಗೆ ಘಾಯಗಳಾವೆ.

ಇದೇ ಕಾಲದಲ್ಲಿ ಸರಕಾರವು ಗಣಿ ಮಾಲಿಕರ ಮೇಲೆ 934 ಮೊಕದ್ದಮೆಗಳನ್ನು ಹೂಡಿದೆ. ಇವುಗಳಲ್ಲಿ 324 ಮೊಕದ್ದಮೆಗಳು ಗಣಿ ನಡೆಸುವುದರಲ್ಲಿ ತರಬೇತಿ ಹೊಂದಿರದ ಮ್ಯಾನೇಜರುಗಳನ್ನು ನೇಮಿಸಿದ್ದುದರ ಬಗ್ಗೆಯೂ, 170 ಮೊಕದ್ದಮೆಗಳನ್ನು ಸರಿಯಾದ ಪಾವತಿ ಮತ್ತು ಯೋಜನೆ ಇಲ್ಲದಿದ್ದ ಬಗ್ಗೆಯೂ, 420 ಮೊಕದ್ದಮೆಗಳನ್ನು ಗಣಿ ನಿಯಮಗಳನ್ನು ಉಲ್ಲಂಘಿಸಿದ್ದರಿಂದಾಗಿಯೂ, 60 ಮೊಕದ್ದಮೆಗಳನ್ನು ಗಣಿಗಳನ್ನು ಅಪಾಯಕಾರಿ ರೀತ್ಯ ನಡೆಸಿದುದಕ್ಕೂ ಹಾಕಲಾಗಿದೆ ಎಂದು ಪ್ರಕಟಣೆಯು ತಿಳಿಸುತ್ತದೆ.

ನಿರುದ್ಯೋಗಿಗಳ ಸಂಖ್ಯೆ ಶೇ. 50 ರಷ್ಟು ಹೆಚ್ಚಿದೆ?

1955ರಿಂದ ಎರಡು ವರ್ಷಗಳ ಅವಧಿಯಲ್ಲಿ ಭಾರತದ ನಾನಾ ಕಡೆಗಳಲ್ಲಿರುವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ದಾಖಲೆಯಾಗಿರುವ ಉದ್ಯೋಗ ಹುಡುಕುವವರ ಸಂಖ್ಯೆಯು ಶೇ. 50ರಷ್ಟು ಅಧಿಕವಾಗಿದೆ ಎಂದು ಸರಕಾರದವರು ಒದಗಿಸಿರುವ ಅಂಕಿಅಂಶಗಳಿಂದ ತಿಳಿದು ಬರುತ್ತದೆ.

ಅಂಕಿಅಂಶಗಳು ಈ ರೀತಿ ಇವೆ:

1955ರಲ್ಲಿ ದಾಖಲೆಯಾಗಿದ್ದವರ ಸಂಖ್ಯೆ 6,91,958 ಮಂದಿ, 1956ರಲ್ಲಿ 7,58,503 ಮತ್ತು 1957ರ ಅಂತ್ಯದ ವೇಳೆಗೆ ಅದು 9,22,099 ಆಗಿತ್ತು.

ಕೇರಳ ಸರಕಾರೀ ಕೈಗಾರಿಕೆಯಲ್ಲಿ ಹೊಸ ಯೋಜನೆ

ಸರಕಾರೀ ಕೈಗಾರಿಕೋದ್ಯಮಗಳಲ್ಲಿ ಉತ್ಪಾದನೆಯನ್ನು ಅಧಿಕಗೊಳಿಸಲು ಅಥವಾ ಖರ್ಚು ಕಡಿಮೆ ಮಾಡಲು ಸೂಕ್ತ ಸಲಹೆಗಳನ್ನು ಕೊಡುವ ಕೆಲಸಗಾರರಿಗೆ ಪಾರಿತೋಷಕವನ್ನು ಕೊಡುವ ಹೊಸ ಯೋಜನೆಯನ್ನು ಕೇರಳ ಸರಕಾರವು ತಯಾರಿಸಿದೆ.

ಈ ಯೋಜನೆಯು ಈಗಾಗಲೇ ಜಾರಿಯಲ್ಲಿ ಬಂದಿದೆ. ಕ್ಯಾಲಿಕಟ್‌ನಲ್ಲಿರುವ ಸರಕಾರದ ಎಣ್ಣೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ಜಿ. ಪಿ. ಕುಮಾರನ್ ಮತ್ತು ಕೆ. ಪಿ. ಕರುಣಾಕರನ್ ಇವರುಗಳಿಗೆ ಪಾರ್ಸಲ್‌ಗಳನ್ನು ಪ್ಯಾಕ್‌ಮಾಡುವ ವಿಧಾನದಲ್ಲಿ ಸುಲಭವಾದ ಕ್ರಮವನ್ನು ಕಂಡುಹಿಡಿದಿದ್ದಕ್ಕಾಗಿ ತಲಾ ರೂ. 25ನ್ನು ಪಾರಿತೋಷಕವಾಗಿ ಕೊಡಲಾಗಿದೆ.

ಕೇರಳ ಸರಕಾರದ ಈ ಯೋಜನೆಯು ಕೆಲಸಗಾರರ ನಡುವೆ ಹೊಸ ಉತ್ಸಾಹವನ್ನು ತರುವುದೇ ಅಲ್ಲದೆ, ಅವರ ಕ್ರಿಯಾತ್ಮಕ ಚಟುವಟಿಕೆಯನ್ನು ಬೆಳಸಲು ಸಹಾಯಕವಾಗುತ್ತದೆ.

ಪದವೀಧರ ನಿರುದ್ಯೋಗಿಗಳ ಸ್ಥಿತಿ ಏನು?

ಭಾರತ ಸರಕಾರದ ಮ್ಯಾನ್‌ಪವರ್ ವಿಭಾಗವು ನಡೆಸಿರುವ ಪರಿಶೀಲನೆಯಂತೆ, ಕಾಮರ್ಸ್ ಡಿಗ್ರಿ ಪಡೆದಿರುವ ಪದವೀಧರ ನಿರುದ್ಯೋಗಿಗಳು ಹೆಚ್ಚು ಸಂಖ್ಯೆ ಇದ್ದಾರೆಂದು ತಿಳಿದುಬಂದಿದೆ.

ಈ ಪರಿಶೀಲನೆಯಲ್ಲಿ ಮೇ 15, 1957ರಲ್ಲಿ ದೇಶದಲ್ಲಿರುವ 151 ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕಛೇರಿಗಳಲ್ಲಿ ನೌಕರಿಗಾಗಿ ದಾಖಲಾಗಿದ್ದ 26,297 ಪದವೀಧರರ ವಿಷಯವನ್ನು ಪರಿಗಣಿಸಲಾಯಿತು. ಇವರಲ್ಲಿ 25,785 ಪದವೀಧರರ ಮಾಹಿತಿಗಳನ್ನು ಕೂಲಂಕುಶವಾಗಿ ಪರೀಕ್ಷಿಸಲಾಯಿತು.

ಇದರಂತೆ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮುಂಬಯಿ ಮತ್ತು ದೆಹಲಿಗಳಲ್ಲಿ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ. ಕೇರಳದಲ್ಲಿ ಸ್ತ್ರೀ ಗ್ರಾಜುಯೇಟ್‌ಗಳಿಗೆ ನೌಕರಿ ದೊರಕಿಸುವುದು ದೊಡ್ಡ ಪ್ರಶ್ನೆಯಾಗಿದೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ದಾಖಲಾಗಿರುವ ಪದವೀಧರರಲ್ಲಿ ಶೇ. 48·5 ಭಾಗ ಬಿ. ಎ. ಡಿಗ್ರಿ ಪಡೆದವರೂ, ಶೇ. 22·7 ಭಾಗ ಬಿ. ಎಸ್. ಸಿ. ಡಿಗ್ರಿ ಪಡೆದವರೂ ಮತ್ತು ಶೇ. 12·8 ಕಾಮರ್ಸ್ ಡಿಗ್ರಿ ಪಡೆದವರೂ ಇತರರು ಬೇರೆ ವಿಷಯಗಳಲ್ಲಿ ಡಿಗ್ರಿ ಪಡೆದವರೂ ಆಗಿದ್ದಾರೆ. ಇವರ ಪೈಕಿ ಶೇ. 76 ಮಂದಿ ಹಿಂದೆ ಎಂದೂ ಉದ್ಯೋಗದಲ್ಲಿ ಇಲ್ಲದವರಾಗಿದ್ದಾರೆ, ಮತ್ತು ಶೆ. 60·4ರಷ್ಟು ಮಂದಿ ಗುಮಾಸ್ತೆ ಕೆಲಸಗಳಿಗಾಗಿ ಯತ್ನಿಸಿದ್ದಾರೆ, ಮತ್ತು ಶೇ. 19·5ರಷ್ಟು ಮಂದಿ ಮಾತ್ರ ತಾಂತ್ರಿಕ ಅಥವಾ ಮತ್ತಿತರ ಉದ್ಯೋಗವನ್ನು ಅಪೇಕ್ಷಿಸಿದ್ದಾರೆ. ಇವರ ವಯಸ್ಸು ಸಾಮಾನ್ಯವಾಗಿ 25 ವರ್ಷ

ಟೆಕ್ಸ್‌ಟೈಲ್ ಕೆಲಸಗಾರರಿಗೆ ಒಟ್ಟು ರೂ. 220 ವೇತನ ಸಿಗಬೇಕು

ಹತ್ತಿಗಿರಣಿ ಕೈಗಾರಿಕೆಯ ಕೆಲಸಗಾರರಿಗೆ ವೇತನವನ್ನು ನಿಗದಿ ಮಾಡಲು ನಿರ್ಮಿತವಾಗಿರುವ ಕೇಂದ್ರ ವೇತನ ಸಮಿತಿಯ ಮುಂದೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆಯವರು ಹತ್ತಿ ಗಿರಣಿ ಕಾರ್ಮಿಕರ ಒಟ್ಟು ವೇತನವನ್ನು ತಿಂಗಳಿಗೆ ರೂ 220 ಗೊತ್ತು ಮಾಡಬೇಕೆಂದು ತಿಳಿಸಿದ್ದಾರೆ. (ಒಟ್ಟುವೇತನವೆಂದರೆ, ಬೋನಸ್, ಪ್ರಾವಿಡೆಂಟ್‌ಫಂಡ್, ಎಂಪ್ಲಾಯೀಸ್ ಸ್ಟೇಟ್‌ಇನ್ಶೂರೆನ್ಸ್ ಸ್ಕೀಮ್, ತುಟ್ಟಿಭತ್ಯ ಇವೆಲ್ಲವೂ ಸೇರುತ್ತದೆ.

1957ರಲ್ಲಿ ತ್ರಿಪಕ್ಷ ಕಾರ್ಮಿಕ ಸಮ್ಮೇಳನವು ಒಪ್ಪಿಕೊಂಡಿರುವ ಕನಿಷ್ಠ ವೇತನದ ಮಟ್ಟವು ತಿಂಗಳಿಗೆ ರೂ. 150 ಆಗಿದೆ ಎಂದು ಡಾಂಗೆಯವರು ತಿಳಿಸಿದ್ದಾರೆ. ತುಟ್ಟಿಭತ್ಯ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬದಲಾಗುತ್ತದೆಂದೂ, ಇಂದು ಮುಂಬಯಿಯಲ್ಲಿ ಹತ್ತಿಗಿರಣಿ ಕೆಲಸಗಾರರಿಗೆ ತುಟ್ಟಿಭತ್ಯವೂ ಸೇರಿ ತಿಂಗಳಿಗೆ 110 ರೂ.ಗಳೂ, ಕಾನ್ಪುರದಲ್ಲಿ 100 ರೂ.ಗಳೂ ಮತ್ತು ಕೊಯಮುತ್ತೂರಿನಲ್ಲಿ 90 ರೂ.ಗಳೂ ಬರುತ್ತಿವೆ ಎಂದು ತಿಳಿಸಿದ್ದಾರೆ. ಶ್ರೀ ಡಾಂಗೆಯವರು ತಮ್ಮ ಸೂಚನೆಯ ಸಮರ್ಥನೆಯಾಗಿ ಅನೇಕ ಅಂಕಿಅಂಶಗಳನ್ನು ಸಮಿತಿಯ ಮುಂದಿರಿಸಿದ್ದಾರೆ. ಸಮಿತಿಯು ಮುಂದೆ ಐದು ತಿಂಗಳ ಅವಧಿಯಲ್ಲಿ ವರದಿಯನ್ನು ಸಮರ್ಪಿಸುವುದೆಂದು ತಿಳಿದುಬಂದಿದೆ. ಶ್ರೀ ಡಾಂಗೆಯವರು ಸಮಿತಿಯನ್ನು ಮತ್ತೊಮ್ಮೆ ಭೆಟ್ಟಿಯಾಗಬಹುದೆಂದೂ ತಿಳಿದುಬಂದಿದೆ.

ಸಮಿತಿಯಲ್ಲಿ ಖಾಸಗೀ ಪ್ರತಿನಿಧಿಗಳಾಗಿ ಶ್ರೀ ಅಶೋಕಮೆಹ್ತಾ ಮತ್ತು ರಾಜಾಸ್ಥಾನದ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಎಚ್. ವಿ. ಮಾಥುರ್‌ರವರೂ, ಮಾಲಿಕರ ಪರವಾಗಿ ಶ್ರೀ ಅರವಿಂದ್ ಎಸ್. ಮುಫತ್‌ಲಾಲ್ ಮತ್ತು ಭರತ್ ರಾಮ್‌ರವರೂ ಕಾರ್ಮಿಕರ ಪರವಾಗಿ ಶ್ರೀ ಎಸ್. ಆರ್. ವಾಸವಾಡ ಮತ್ತು ರಾಮಾನುಜಂರವರೂ ಇದ್ದಾರೆ.

———

ಗುಲ್ಬರ್ಗ—

ಷಹಬಾದ್ ಸಿಮೆಂಟ್ ಕಾರ್ಖಾನೆ ಕೆಲಸಗಾರರ ಸಮ್ಮೇಳನ

ಷಹಬಾದ್ ಸಿಮೆಂಟ್ ಕಾರ್ಖಾನೆ ಕೆಲಸಗಾರರ ವಾರ್ಷಿಕ ಸಮ್ಮೇಳನವು ಷಹಬಾದ್‌ನಲ್ಲಿ ಏಪ್ರಿಲ್ 7ರಂದು ಶ್ರೀ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಹಿಂದಿನ ಸಾಲಿನ ಚಟುವಟಿಕೆಗಳ ವರದಿಯನ್ನು ಮುಂದಿನ ಸಾಲಿನ ಕಾರ್ಯಕ್ರಮವನ್ನು ಕುರಿತು ಸಮ್ಮೇಳನವು ಚರ್ಚಿಸಿತು. ಮುಂದಿನ ವರ್ಷದ ಸಂಘದ ಅಧಿಕಾರಿಗಳನ್ನು ಸಮ್ಮೇಳನವು ಚುನಾಯಿಸಿತು. ಶ್ರೀ ಸೋಮರಾಜ್ ಅಧ್ಯಕ್ಷರಾಗಿಯೂ, ಶ್ರೀಗಳಾದ ತಿಮ್ಮಯ್ಯ ಮತ್ತು ಈರಣ್ಣ ಇವರು ಉಪಾಧ್ಯಕ್ಷರಾಗಿಯೂ, ಶ್ರೀ ಶ್ರೀನಿವಾಸ ಗುಡಿಯವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಲಕ್ಷ್ಮಣ ಮೋರೆಯವರು ಜಂಟಿ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ.

ಸಂಘದ ಬಹಿರಂಗ ಅಧಿವೇಶನವನ್ನುದ್ದೇಶಿಸಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಾರ್ಯದರ್ಶಿಗಳೂ ಪಾರ್ಲಿಮೆಂಟ್ ಸದಸ್ಯರೂ ಆದ ಡಾ। ರಾಜಬಹದೂರ್ ಗೌಡ್‌ರವರು ಭಾಷಣ ಮಾಡಿದರು.

ಸಮ್ಮೇಳನವು ಅಖಿಲ ಭಾರತ ಸಿಮೆಂಟ್ ಕೆಲಸಗಾರರ ಫೆಡರೇಶನ್ನಿನ ಪ್ರತಿನಿಧಿಗಳನ್ನು ಸರಕಾರವು ನೇಮಕ ಮಾಡಿರುವ ಸಿಮೆಂಟ್ ವೇತನ ನಿರ್ಧಾರ ಸಮಿತಿಯಲ್ಲಿ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುವ ಮತ್ತು ಇತ್ತೀಚೆಗೆ ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಮೇಲೆ ಪೋಲೀಸರ ಗೋಲೀಬಾರನ್ನು ಖಂಡಿಸುವ ಮತ್ತು ಈ ಪ್ರಕರಣದ ಬಗ್ಗೆ ಸರಕಾರವು ಬಹಿರಂಗ ವಿಚಾರಣೆ ನಡೆಸಬೇಕೆಂದು ಒತ್ತಾಯಪಡಿಸುವ, ನೌಕರರ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸುವ ನಿರ್ಣಯಗಳನ್ನು ಅಂಗೀಕರಿಸಿತು.

ಪಾರ್ಟಿ ನಿಧಿಗೆ ನಿಮ್ಮ ಕಾಣಿಕೆ ಕೂಡಲೇ ಕಳಿಸಿರಿ

ಮಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ ಸಮ್ಮೇಳನದಲ್ಲಿ, ಪ್ರಾಂತ ಸಮಿತಿಯ ನಿಧಿಗೆ ೨,೦೦೦ ರೂ.ಗಳನ್ನು ಮೇ ತಿಂಗಳೊಳಗೆ ಸಂಗ್ರಹಿಸಿ ಕೊಡಬೇಕೆಂದು ಎಲ್ಲ ಪಾರ್ಟಿ ಸದಸ್ಯರಿಗೂ, ಹಿತೈಷಿಗಳಿಗೂ ಕರೆ ಕೊಡಲಾಗಿತ್ತು. ಪಾರ್ಟಿ ಘಟಕಗಳೂ, ಸದಸ್ಯರೂ ಇದಕ್ಕೆ ಹೆಚ್ಚಿನ ಗಮನವಿತ್ತು ಈ ತಿಂಗಳ ಅಂತ್ಯದೊಳಗಾಗಿ ಸಂಗ್ರಹಿಸಲಾಗಿರುವ ಹಣವನ್ನು ಕಳಿಸಬೇಕೆಂದು ಕೇಳಿಕೊಳ್ಳುತ್ತೇವೆ. ಈ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ರೂ. 200, ಚಿತ್ರದುರ್ಗ ಜಿಲ್ಲೆಯಿಂದ ರೂ. 50, ಭದ್ರಾವತಿಯಿಂದ ರೂ. 30 ಮತ್ತು ಕೆ. ಜಿ. ಎಫ್.ನಿಂದ ರೂ. 10 ಬಂದಿದೆ.

ಕಾರ್ಯದರ್ಶಿ,
ಭಾರತ ಕಮ್ಯೂನಿಸ್ಟ್ ಪಾರ್ಟಿ
ಕರ್ನಾಟಕ ಪ್ರಾಂತ ಸಮಿತಿ
ಸುಲ್ತಾನ್‌ಪೇಟೆ, ಬೆಂಗಳೂರು 2

ಹುಬ್ಬಳ್ಳಿ—

೨,೨೦೦ ಮಂದಿಗೆ ನಿರುದ್ಯೋಗ !

ಹುಬ್ಬಳ್ಳಿಯಲ್ಲಿದ್ದ ನ್ಯೂ ಕರ್ನಾಟಕ ಕಾಟನ್ ಟೆಕ್ಸ್‌ಟೈಲ್ ಮಿಲ್ಸ್ ಅನ್ನು ಮಾಲೀಕರು ಏಪ್ರಿಲ್ 4ನೇ ತಾರೀಖಿನಿಂದ ಮುಚ್ಚಿದ್ದರಿಂದಾಗಿ ೨,೨೦೦ ಸಂಸಾರಗಳು ನಿರುದ್ಯೋಗದಿಂದ ನರಳುವ ಸ್ಥಿತಿಯುಂಟಾಗಿದೆ.

ಕಾರ್ಖಾನೆಯು ನಷ್ಟದಿಂದ ನಡೆಯುತ್ತಿದೆಯೆಂದೂ, ಸರಕಾರದ ತೆರಿಗೆಯ ಹೊರೆ ಹೆಚ್ಚಾಗಿರುವುದರಿಂದಲೂ, ಕೈಗಾರಿಕೆಯಲ್ಲಿ ಬಿಕ್ಕಟ್ಟು ಇರುವುದರಿಂದಾಗಿಯೂ ಕಾರ್ಖಾನೆಯನ್ನು ಮುಚ್ಚುವುದಾಗಿ ಮಾಲಿಕರು ಒಂದು ತಿಂಗಳ ಹಿಂದೆಯೇ ನೋಟೀಸು ಇತ್ತಿದ್ದರು.

(ಕೊನೇ ಪುಟ ನೋಡಿ)

— ಓದುಗರ ಓಲೆ —

(೧ನೇ ಪುಟದಿಂದ)

ಪರೇಷನ್ ಗಲಾಟೆಯಲ್ಲಿದ್ದರು. ಅವರು ಈಚೆ ಬರುವ ವೇಳೆಗೆ ಈ ಹುಡುಗಿ ಸತ್ತು ಹೋದಳು. ಆಗ ಆ ಡಾಕ್ಟರು ಆ ಹುಡುಗಿಯನ್ನು ಪರೀಕ್ಷಿಸಿ ನೋಡಲಾಗಿ ಹುಡುಗಿಯ ಗಂಟಲಿನಲ್ಲಿ ಎಲುಬಿನ ಚೂರು ಇದ್ದಿದ್ದು ಕಂಡುಬಂತು.

ಈ ರೀತಿಯ ಅನ್ಯಾಯ, ಅತ್ಯಾಚಾರ ಲಂಚಗುಳಿತನ ಮುಂತಾದುವುಗಳನ್ನು ಆದಷ್ಟು ಬೇಗ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಗಮನಿಸಿ ಸರಿಪಡಿಸಬೇಕೆಂದು ಕೋರುತ್ತೇನೆ.

ಅಬ್ದುಲ್ ಮಜೀದ್
ಕೋಲಾರ

ರಾಷ್ಟ್ರೀಯ

ಭಾರತ ಸರಕಾರದಿಂದ ಗ್ರಹಾಂ ವರದಿಯ ತಿರಸ್ಕಾರ

ಕಾಶ್ಮೀರದ ಪ್ರಶ್ನೆಯನ್ನು ಕುರಿತು ಇತ್ಯರ್ಥಗೊಳಿಸಲಿಕ್ಕಾಗಿ ವಿಶ್ವ ಸಂಸ್ಥೆಯ ಪ್ರತಿನಿಧಿಯಾಗಿ ಭಾರತ-ಪಾಕೀಸ್ಥಾನಗಳಿಗೆ ಇತ್ತೀಚೆಗೆ ಭೇಟಿಇತ್ತಿದ್ದ ಡಾ|| ಫ್ರಾಂಕ್‌ಗ್ರಹಾಂರವರು ಭದ್ರತಾ ಸಮಿತಿಗೆ ಒಪ್ಪಿಸಿರುವ ವರದಿಯನ್ನು ಭಾರತ ಸರಕಾರವು ತಿರಸ್ಕರಿಸಿದೆ. ಗ್ರಹಾಂರವರ ಪ್ರಸಕ್ತ ಸೂಚನೆಗಳಲ್ಲಿ ಹಿಂದಿನ ಸಲಹೆಗಳಿಗಿಂತ ಹೊಸತೇನೂ ಇಲ್ಲ. ಗ್ರಹಾಂರವರು ಭಾರತಕ್ಕೆ ಭೇಟಿಕೊಡುವ ಮೊದಲೇ ಅವರ ಈ ಪ್ರಯತ್ನ ನಿಷ್ಫಲವಾಗುವುದೆಂದು ಹೇಳಲಾಗಿತ್ತು, ಅದರರಂತೆಯೇ ಇಂದು ಅವರ ಕಾರ್ಯವು ನಿಷ್ಫಲವಾಗಿದೆ.

ಕಾಶ್ಮೀರದ ಪ್ರಶ್ನೆಯನ್ನು ಅಲ್ಲಿನ ಜನತೆಯೇ ಈಗಾಗಲೇ ನಿರ್ಧರಿಸಿದೆ. ಆದರೆ ಪಾಕೀಸ್ಥಾನದೊಂದಿಗೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸೇರಿಕೊಂಡು ಎರಡು ರಾಷ್ಟ್ರಗಳ ನಡುವೆ ತಿಕ್ಕಾಟವು ಮುಂದುವರಿಯುವಂತೆ ಮಾಡುತ್ತಿವೆ. ಇಲ್ಲಸಲ್ಲದ ಪ್ರಚೋದನೆಯನ್ನು ಮಾಡಲಾಗುತ್ತಿದೆ. ವಿಶ್ವ ಸಂಸ್ಥೆಯ ಹೆಸರಿನಲ್ಲಿ ಭಾರತದ ಮೇಲೆ ಒತ್ತಾಯ ಪೂರ್ವಕವಾದ ತೀರ್ಮಾನವನ್ನು ಹೊರಿಸಲು ಯತ್ನಿಸಲಾಗುತ್ತಿದೆ.

ಗ್ರಹಾಂರವರ ಇತ್ತೀಚೆಗಿನ ವರದಿಯಲ್ಲಿ ಪಾಕೀಸ್ಥಾನ ಆಕ್ರಮಿತ ಅಜಾದ್ ಕಾಶ್ಮೀರದಲ್ಲಿ ವಿಶ್ವ ಸಂಸ್ಥೆಯ ಪಡೆಗಳನ್ನು ಇರಿಸಬೇಕೆಂದು ಸೂಚಿಸಲಾಗಿದೆ. ಭಾರತ ಸರಕಾರವು ಈ ಹಂಚಿಕೆಯನ್ನು ಸರಿಯಾಗಿಯೇ ವಿರೋಧಿಸಿದೆ. ಪಾಕೀಸ್ಥಾನ ಆಕ್ರಮಿತ ಪ್ರದೇಶದಲ್ಲಿ ವಿಶ್ವಸಂಸ್ಥೆ ಸೇನೆಯನ್ನಿರಿಸ ಕೊಳ್ಳಕೂಡದೆಂದು ಪಾಕೀಸ್ಥಾನಕ್ಕೆ ಹೇಳಲು ತಮಗೆ ಅಧಿಕಾರವಿಲ್ಲವೆಂದೂ, ಪಾಕೀಸ್ಥಾನವು ಸಾರ್ವಭೌಮ ರಾಷ್ಟ್ರವಾಗಿರುವುದರಿಂದ ತನಗೆ ಸರಿತೋರಿದಂತೆ ಮಾಡಬಹುದೆಂದೂ ಆದರೆ ಭಾರತದ ಮಟ್ಟಿಗೆ ಈ ಸೂಚನೆಯನ್ನು ತೀವ್ರವಾಗಿ ವಿರೋಧಿಸುವುದೆಂದೂ ಭಾರತ ಸರಕಾರವು ಸ್ಪಷ್ಟಪಡಿಸಿದೆ. ಭಾರತವು ಪಾಕೀಸ್ಥಾನದೊಂದಿಗೆ ಕಾಶ್ಮೀರ ಪ್ರಶ್ನೆಯನ್ನು ಮತ್ತು ಇತರ ಸಮಸ್ಯೆಗಳನ್ನು ಶಾಂತಿಯುತವಾಗಿಚರ್ಚಿಸಿ ಇತ್ಯರ್ಥಗೊಳಿಸಲು ಸದಾಸಿದ್ಧವಿರುವುದಾಗಿ ಭಾರತ ಸರಕಾರವು ಘೋಷಿಸಿದೆ. ಹೊರದೇಶಗಳು ಈ ವಿವಾದದಲ್ಲಿ ತಲೆ ಹಾಕುವುದನ್ನು ಎಲ್ಲ ಪ್ರಗತಿಗಾಮಿಗಳೂ ವಿರೋಧಿಸಿದ್ದಾರೆ.

ವಿಶ್ವಸಂಸ್ಥೆಯ ಆಶ್ರಯದಲ್ಲಿ, ನೇತೃತ್ವದಲ್ಲಿ, ಭಾರತ-ಪಾಕೀಸ್ಥಾನಗಳ ಪ್ರಧಾನಿಗಳು ಭೇಟಿಮಾಡಿ ಗ್ರಹಾಂವರದಿಯ ಆಧಾರದ ಮೇಲೆ ಕಾಶ್ಮೀರದ ಪ್ರಶ್ನೆಯನ್ನು ಚರ್ಚಿಸಿ ಇತ್ಯರ್ಥಕ್ಕೆ ಬರಬೇಕೆಂದು ನನುೂದಿಸಿರುವ ಸೂಚನೆಯನ್ನು ಭಾರತ ಸರಕಾರವು ತಳ್ಳಿಹಾಕಿದೆ. ಗ್ರಹಾಂವರದಿಯನ್ನೇ ಸಂಪೂರ್ಣವಾಗಿ ತಿರಸ್ಕರಿಸಿರುವಾಗ, ಮೇಲಿನ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಕಾಶ್ಮೀರದ ಯಾವ ಭಾಗದಲ್ಲೇ ಆಗಲಿ ಅದು ಭಾರತದ ಅಂಗರಾಜ್ಯವಾಗಿರುವುದರಿಂದ ವಿದೇಶೀ ಸೈನ್ಯಗಳು ಅದು ವಿಶ್ವ ಸಂಸ್ಥೆಯ ಹೆಸರಿನಲ್ಲೇ ಆಗಲಿ ಅಥವಾ ಬೇರೇನೇ ಆಗಲಿ ನೆಲಸುವುದು ಭಾರತದ ಸಾರ್ವಭೌಮತ್ವಕ್ಕೆ ಭಾರಿ ಅತಂಕವಾಗಿರುತ್ತದೆ. ಈ ಪ್ರಯತ್ನವನ್ನು ತೀವ್ರವಾಗಿ ವಿರೋಧಿಸುವುದು ಅತ್ಯಗತ್ಯ.

ಶಿಸ್ತು ಬಿಗಿಗೊಳಿಸಲು ಕಾಂಗ್ರೆಸ್ ಕಾರ್ಯ ಸಮಿತಿ ತೀರ್ಮಾನ

ಶಿಸ್ತನ್ನು ಉಲ್ಲಂಘಿಸಿದವರ ಮೇಲೆ ಉಗ್ರಕಾರ್ಯಕ್ರಮ ತೆಗೆದುಕೊಳ್ಳಲು ಕಾಂಗ್ರೆಸ್ ಕಾರ್ಯ ಸಮಿತಿ ದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದೆ. ಸಾರ್ವತ್ರಿಕ ಚುನಾವಣೆಗಳ ನಂತರ ಒಂದು ವರ್ಷದೊಳಗಾಗಿ ದೇಶದ ನಾನಾ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಒಳಜಗಳಗಳು ಉದ್ಭವಿಸಿ, ಮಂತ್ರಿಮಂಡಲಗಳು ಉರುಳುವ ಸ್ಥಿತಿಗೆ ಬಂದಿದ್ದೇ ಈ ಉಗ್ರಶಿಸ್ತಿನ ಕ್ರಮವನ್ನು ಕೈಗೊಳ್ಳಲು ಕಾರಣವಾಗಿದೆ. ಈ ನಿರ್ಣಯವನ್ನು ಕೈಗೊಳ್ಳುವಾಗ ಇತ್ತೀಚೆಗೆ ರಾಜ್ಯ ಸಭೆಗೆ ನಡೆದ ಚುನಾವಣೆಗಳಲ್ಲಿ ಹಲವು ಕಾಂಗ್ರೆಸ್ ಶಾಸನಸಭಾ ಸದಸ್ಯರುಗಳು ವಿರೋಧ ಪಕ್ಷಗಳ ಸದಸ್ಯರಿಗೆ ಮತವಿತ್ತ ಪ್ರಸಂಗವನ್ನು, ಮಂತ್ರಿ ಮಂಡಲದ ವಿರುದ್ಧವಾಗಿ ಸಹಿಸಂಗ್ರಹಿಸುವ ಕ್ರಮವನ್ನು ಗಮನದಲ್ಲಿರಿಸಿ ಮಾಡಲಾಗಿದೆ ಎಂದು ಹೇಳಲಾಗಿದೆ.

ಕಾಂಗ್ರೆಸಿನಲ್ಲಿ ಅಶಿಸ್ತು, ಲಂಚಗುಳಿತನ, ಸ್ವಜನ ಪಕ್ಷಪಾತ ಇವು ಮೂಡಿರುವುದು ಇಂದಿನಿಂದಲ್ಲ, ಅಧಿಕಾರಕ್ಕೆ ಬಂದ ಹತ್ತು ವರ್ಷಗಳಿಂದಲೂ ಬೆಳೆದು ಬಂದಿರುವುದಾಗಿದೆ. ಪ್ರತಿಸಾರಿಯೂ ಇಂಥ ಗೊಂದಲವೆದ್ದಾಗ ಕಾಂಗ್ರೆಸ್ ನಾಯಕತ್ವವು ತೀವ್ರಕ್ರಮ ತೆಗೆದುಕೊಳ್ಳುವುದಾಗಿ ಘೋಷಿಸುತ್ತದೆ. ಆದರೆ ಕಾರ್ಯತಃ ಅದು ಜಾರಿಗೆ ಬರುವುದಿಲ್ಲವಾಗಿದೆ.

ಕಾಂಗ್ರೆಸ್ ಕಾರ್ಯಸಮಿತಿಯ ಈ ತೀರ್ಮಾನವು ತಾತ್ಕಾಲಿಕವಾಗಿ ಪ್ರಸಕ್ತ ಬಿಕ್ಕಟ್ಟನ್ನು ಮುಂದಕ್ಕೆ ಹಾಕಲು ಎಡೆಗೊಡುತ್ತದೆಯೇ ಹೊರತು ಅದಕ್ಕೆ ಪರಿಹಾರ ನೀಡುವುದಿಲ್ಲ. ಜನತೆಗೆ ಇತ್ತ ಆಶ್ವಾಸನೆಗಳನ್ನು ಕಾಂಗ್ರೆಸ್ ಎಷ್ಟುಮಟ್ಟಿಗೆ ಅಮಲಿಗೆ ತಂದಿದೆಯೋ ಅಷ್ಟೇ ಮಟ್ಟಿಗೆ ತನ್ನ ಸಂಸ್ಥೆಯಲ್ಲಿ ಶಿಸ್ತನ್ನು ಪರಿಪಾಲಿಸುವ ಕಾರ್ಯವೂ ಆಗಿದೆ.

ಅಧಿಕಾರ ಲಾಲಸೆಯಿಂದ ಪರಸ್ಪರ ಗುಂಪುಗಳನ್ನು ರಚಿಸಿಕೊಂಡು ಕಾದಾಡುತ್ತಿರುವ ವಿರೋಧಿ ತಂಡಗಳಲ್ಲಿ, ಒಡಂಬಡಿಕೆ ಮೂಡಿಸಿ, ಶಿಸ್ತನ್ನು ಬೇರೂರಿಸುವುದು ಬರೇ ನಿರ್ಣಯದಿಂದ ಸಾಧ್ಯವಿಲ್ಲ. ತಕ್ಕ ಕ್ರಮ ತೆಗೆದುಕೊಂಡಲ್ಲಿ ಮಾತ್ರ ಸಾಧ್ಯ. ಮಂತ್ರಿಗಳು ಲಂಚ ಮುಸುಮತ್ತುಗಳಿಗೆ, ಅಧಿಕಾರದ ದುರುಪಯೋಗಕ್ಕೆ ಕೈ ಹಾಕಿರುವ ಅನೇಕ ಆರೋಪಗಳೂ, ಪುರಾವೆಗಳೂ ಇದ್ದಾಗ್ಯೂ ಸಹ ಕಾಂಗ್ರೆಸ್ ನಾಯಕತ್ವಕ್ಕೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಮರ್ಥ್ಯವಿಲ್ಲವಾಗಿದೆ. ಇಂಥ ಸನ್ನಿವೇಶದಲ್ಲಿ ನಿರ್ಣಯವೊಂದನ್ನು ಮಾಡುವುದು ಜನತೆಯನ್ನು, ನಿಷ್ಠಾವಂತ ಕಾಂಗ್ರೆಸ್ ಸದಸ್ಯರನ್ನು ಮೋಸಗೊಳಿಸುವುದಾಗಿದೆ ಅಷ್ಟೆ. ಮುಂದಿನ ಕೆಲವು ತಿಂಗಳುಗಳಲ್ಲಿ ಕಾಂಗ್ರೆಸ್ ಕಾರ್ಯ ಸಮಿತಿಯ ಈ ಶಿಸ್ತಿನ ಕ್ರಮದ ಗೊತ್ತುವಳಿ ಎಷ್ಟು ಮಟ್ಟಿಗೆ ಅಮಲಿಗೆ ಬರುವುದೆಂಬುದು ಗೊತ್ತಾಗುತ್ತದೆ.

ಮುಂಬಯಿ ಮೇಯರ್ ಆಗಿ ಕಾಂ|| ಮಿರಜ್‌ಕರ್

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರೂ, ಕಮ್ಯೂನಿಸ್ಟ್ ಪಾರ್ಟಿಯ ಮುಂದಾಳುಗಳೂ ಆದ ಕಾಂ| ಎಸ್. ಎಸ್. ಮಿರಜ್‌ಕರ್‌ರವರು ಮುಂಬಯಿ ಕಾರ್ಪೊರೇಷನ್ನಿನ ಮೇಯರ್ ಆಗಿ ಚುನಾಯಿತರಾಗಿದ್ದಾರೆ. ಮುಂಬಯಿ ಕಾರ್ಪೊರೇಷನ್ನಿನ ಇತಿಹಾಸದಲ್ಲಿ ಕಮ್ಯೂನಿಸ್ಟರೊಬ್ಬರು ಮೇಯರ್ ಆಗಿ ಆಯ್ಕೆಯಾಗಿರುವುದು ಇದೇ ಪ್ರಥಮ ಬಾರಿ. ಮೇಯರ್ ಆಗಿ ಮಿರಜ್‌ಕರ್‌ರವರ ಆಯ್ಕೆಯು ಕಾರ್ಮಿಕ ವರ್ಗಕ್ಕೆ ದೊರೆತ ದೊಡ್ಡ ಮನ್ನಣೆಯಾಗಿದೆ ಮತ್ತು ಹೆಮ್ಮೆಯ ವಿಷಯವಾಗಿದೆ.

ಕಾಮ್ರೇಡ್ ಮಿರಜ್‌ಕರ್‌ರವರು ಕಮ್ಯೂನಿಸ್ಟ್ ಚಳವಳಿಯಲ್ಲಿ ಕೆಲಸ ಮಾಡಲು 1922ರಲ್ಲಿ ಆರಂಭಿಸಿದರು.

ಬ್ಯಾಂಕ್ ನೌಕರರಾಗಿದ್ದ ಇವರು ಬೇಗನೇ ತಮ್ಮ ಕೆಲಸವನ್ನು ಬಿಡಬೇಕಾಗಿ ಬಂದಿತು. ಮುಂಬಯಿಯಲ್ಲಿ ಟ್ರೇಡ್ ಯೂನಿಯನ್ ಚಳವಳಿಯ ಸಂಸ್ಥಾಪಕರಲ್ಲಿ ಮಿರಜ್‌ಕರ್ ಒಬ್ಬರಾಗಿದ್ದಾರೆ. ವಿಖ್ಯಾತವಾದ ಮೀರತ್ ಒಳಸಂಚಿನ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದರು.

1934ರಲ್ಲಿ ಅವರು ಎಸ್. ವಿ. ದೇಶಪಾಂಡೆಯವರೊಂದಿಗೆ ಮಾಸ್ಕೋದಲ್ಲಿ ಸೇರಿದ್ದ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಮಹಾಸಭೆಗೆ ತೆರಳಿದ್ದರು, ಆದರೆ ಅವರನ್ನು ಸಿಂಗಪುರದಲ್ಲಿ ದಸ್ತಗಿರಿಮಾಡಿ ಭಾರತಕ್ಕೆ ಕರೆತಂದು ಅಹಮದ್ ನಗರದಲ್ಲಿ ಬಂಧಿಸಿಟ್ಟು, 1937ರಲ್ಲಿ ಬಿಡುಗಡೆ ಮಾಡಲಾಯಿತು. ಅವರನ್ನು ಮತ್ತೆ 1940ರಲ್ಲಿ ಬಂಧಿಸಿ ದಿಯೋಲಿ ಶಿಬಿರದಲ್ಲಿರಿಸಲಾಗಿತ್ತು. ಮತ್ತೆ 1948ರಲ್ಲಿ ಬಂಧಿಸಿ ಯೆರವಾಡ ಜೈಲಿನಲ್ಲಿರಿಸಲಾಗಿತ್ತು. 1956ರಲ್ಲಿ ಸಂಯುಕ್ತ ಮಹಾರಾಷ್ಟ್ರ ಚಳವಳಿಯ ಸಂಬಂಧದಲ್ಲಿ ಬಂಧಿಸಲಾಯಿತು.

ಇತ್ತೀಚೆಗೆ ಅವರು ಮುನಿಸಿಪಲ್ ಕಾರ್ಪೊರೇಷನ್ನಿನ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದರು.

ಸರಕಾರ ಮತ್ತು ಜನತೆ — ಒಂದು ಹೊಸ ದೃಷ್ಟಿ

(೨ನೇ ಪುಟದಿಂದ)

ಅಕ್ಕಿ ಬೆಲೆಯು (100 ರೂ. ಜನವರಿ 1956) ಜುಲೈ 1956ರಲ್ಲಿ 138ಕ್ಕೆ ಏರಿದ್ದಿತು, 1957ರ ಜನವರಿಯಲ್ಲಿ ರೂ. 124ಕ್ಕೆ ಇಳಿಯಿತು. ಆದರೆ 1957ರ ಜುಲೈನಲ್ಲಿ ರೂ. 129 ಮತ್ತು 1958 ಜನವರಿಯಲ್ಲಿ 132 ರೂ. ಆಗಿದ್ದಿತು.

ಅಂದರೆ 1956ರ ಜನವರಿ ಮತ್ತು ಜುಲೈ ತಿಂಗಳುಗಳಲ್ಲಿ ಬೆಲೆ ಏರಿಕೆಯು ಶೇ. 38 ಆಗಿದ್ದರೆ, 1957ರಲ್ಲಿ ಅದೇ ಕಾಲಾವಧಿಯಲ್ಲಿ ಏರಿಕೆಯು ಶೇ. 4 ಆಗಿದ್ದಿತು ಮತ್ತು 1956ರ ಜನವರಿ ಮತ್ತು 1957ರ ಜನವರಿ ಅವಧಿಯಲ್ಲಿ ಬೆಲೆ ಏರಿಕೆಯು ಶೇ. 24 ಆಗಿದ್ದರೆ, 1957 ಜನವರಿ ಮತ್ತು 1958 ಜನವರಿ ಅವಧಿಯಲ್ಲಿ ಕೇವಲ ಶೇ. 6·5 ಆಗಿದ್ದಿತು.

ಆಡಳಿತ ಸುಧಾರಣಾ ಸಮಿತಿಯನ್ನು ನೇಮಕಮಾಡಿ ಆಡಳಿತ ಯಂತ್ರದಲ್ಲಿ ಸುಧಾರಣೆಯನ್ನು ತರಲು ಕೇರಳ ಸರಕಾರವು ಯತ್ನಿಸಿದೆ. ಮುಂದಿನ ಕೆಲವು ತಿಂಗಳಲ್ಲಿ ಈ ಕಾರ್ಯವು ಕೃತಿಗಿಳಿಯಲಿದೆ.

ಅಧಿಕಾರದ ವಿಕೇಂದ್ರೀಕರಣ ಮತ್ತು ಅಧಿಕಾರದ ಪ್ರಜಾಪ್ರಭುತ್ವಗೊಳಿಸುವುದು, ವಿವಿಧ ಇಲಾಖೆಗಳ ನಡುವೆ ಎಲ್ಲ ಮಟ್ಟಗಳಲ್ಲೂ ಸಂಬಂಧವೇರ್ಪಡಿಸುವುದು, ನಿಧಾನ ಮತ್ತು ಲಂಚ ಮುಸುಮತ್ತುಗಳನ್ನು ನಿರ್ಮೂಲಗೊಳಿಸುವುದು, ಕೆಳದರ್ಜೆ ನೌಕರರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು, ಇತ್ಯಾದಿ ಈ ಸುಧಾರಣೆಯ ಮೂಲ ಉದ್ದಿಶ್ಯವಾಗಿದೆ. ತಾತ್ಕಾಲಿಕವಾಗಿ ಈಗಾಗಲೇ ಅನೇಕ ಕ್ರಮಗಳನ್ನು ಈ ವಿಷಯದಲ್ಲಿ ತೆಗೆದುಕೊಳ್ಳಲಾಗಿದೆ.

ಆಹಾರ ಪರಿಸ್ಥಿತಿ, ನೀರಾವರಿ ವಿವಾದಗಳು ಇತ್ಯಾದಿ ಪ್ರಮುಖ ಪ್ರಶ್ನೆಗಳನ್ನು ಕುರಿತು ಚರ್ಚಿಸಲು ಸರ್ವಪಕ್ಷ ಸಮ್ಮೇಳನಗಳನ್ನು ನಡೆಸಲಾಗಿದೆ.

ಮಲಬಾರು ಪ್ರದೇಶದ ಕಡಿಮೆ ದರ್ಜೆ ಸಂಬಳ ಪಡೆಯುತ್ತಿದ್ದ ಸರಕಾರಿ ನೌಕರರ ವೇತನದಲ್ಲಿ ಹೆಚ್ಚಳ, ಪ್ರೈಮರಿ ಶಾಲೆಗಳು, ಸಾರಿಗೆ ಕೆಲಸಗಾರರು, ಪಂಚಾಯಿತಿ ಕೆಲಸಗಾರರು, ತರಬೇತಿಪಡೆದ ಪದವೀಧರ ಉಪಾಧ್ಯಾಯರುಗಳು, ಇತ್ಯಾದಿ ನೌಕರರ ಸಂಬಳವನ್ನು ಹೆಚ್ಚಿಸಿದುದರಿಂದಾಗಿ ಸರಕಾರಕ್ಕೆ 250 ಲಕ್ಷ ರೂ.ಗಳು ಅಧಿಕ ವೆಚ್ಚವಾಗಿದೆ.

ಸರಕಾರಿ ಕಾರ್ಯದರ್ಶಿಯ ಮಟ್ಟದ ಅಧಿಕಾರಿಯ ನೇತೃತ್ವದಲ್ಲಿ ಲಂಚ ನಿರೋಧ ಖಾತೆಯನ್ನು ನಿರ್ಮಿಸಲಾಗಿದೆ. ಆಪಾದನೆಗಳನ್ನು ಪರಿಶೀಲಿಸಲು ವಿಶೇಷ ನ್ಯಾಯಾಧೀಶರನ್ನು ಮತ್ತು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ. ಸುಮಾರು 30 ಅಧಿಕಾರಿಗಳು ಈಗಾಗಲೇ ಅಪಾಧಿತರಾಗಿದ್ದಾರೆ.

—(ಮುಂದುವರಿಯುವುದು)—

ನಿಜಲಿಂಗಪ್ಪನವರ ಸರಕಾರಕ್ಕೆ ಹೈಕಮಾಂಡಿನಿಂದ ಜೀವದಾನ ?

ದೆಹಲಿಯಲ್ಲಿ ಏಪ್ರಿಲ್ ೮ರಂದು ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು, ನಿಜಲಿಂಗಪ್ಪನವರ ಸರಕಾರಕ್ಕೆ ಜೀವದಾನ ಮಾಡಿದೆಯೆಂದು ತಿಳಿದುಬಂದಿದೆ. ಆದರೆ ಇದು ಎಷ್ಟು ಕಾಲ ಎಂಬುದೀಗ ಪ್ರಶ್ನೆಯಾಗಿದೆ. ನಿಜಲಿಂಗಪ್ಪನವರ ಬೆಂಬಲಿಗರೂ, ವಿರೋಧಿಗಳೂ ಕಾಂಗ್ರೆಸ್ ಹೈಕಮಾಂಡಿನ ಮುಂದೆ ತಮ್ಮ ಅಹವಾಲನ್ನು ಮಂಡಿಸಿದ್ದಾರೆ. ಹೈಕಮಾಂಡ್ ಈ ಬಗ್ಗೆ ಪೂರ್ಣ ಪರಿಶೀಲನೆಯನ್ನು ನಡೆಸಿಲ್ಲವೆಂದೂ, ತೀರ್ಮಾನವನ್ನು ಮುಂದೆ ತೆಗೆದುಕೊಳ್ಳುವುದಾಗಿಯೂ ತಿಳಿದುಬಂದಿದೆ. ವಿರೋಧಿ ಗುಂಪಿನವರು ಒಡ್ಡಿರುವ ವಾದಗಳೆಲ್ಲವನ್ನೂ ಮತ್ತು ನಾಯಕತ್ವದಲ್ಲಿ ವಿಶ್ವಾಸದ ಪ್ರಶ್ನೆಯನ್ನು ಪೂರ್ಣವಾಗಿ ಪರಿಶೀಲಿಸುವ ಭರವಸೆಯನ್ನು ಹೈಕಮಾಂಡ್ ಕೊಟ್ಟಿರುವುದಾಗಿ ತಿಳಿದುಬಂದಿದೆ.

ದೆಹಲಿಯಿಂದ ಹಿಂತಿರುಗಿದ ಮುಖ್ಯಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತ, ಮೈಸೂರು ಪರಿಸ್ಥಿತಿಯ 'ಪೂರ್ಣ' ಅರಿವು ಪಡೆದಿರುವ ಹೈಕಮಾಂಡಿನವರು ತಮ್ಮನ್ನು ರಾಜೀನಾಮೆ ಕೊಡಲು ತಿಳಿಸಿದರೂ ಕಾಂಗ್ರೆಸ್ಸಿನ ಶಿಸ್ತಿನ ಸಿಪಾಯಿಯಾಗಿ, ತಾವು ರಾಜೀನಾಮೆ ಕೊಡಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ನಿಜಲಿಂಗಪ್ಪನವರು ಹೈದರಾಬಾದಿನಲ್ಲಿ ಮಾತನಾಡುತ್ತಾ, ತಮ್ಮ ಮಂತ್ರಿಮಂಡಲದ ವಿರೋಧಿಗಳು, ಸಹಿಸಂಗ್ರಹದ ಕಾರ್ಯದಲ್ಲಿ ತೊಡಗಿದ್ದವರು ಅಧಿಕಾರದಿಂದ ಆಕರ್ಷಿತರಾಗಿದ್ದಾರೆಂದು ಆರೋಪಿಸಿದ್ದಾರೆ. ಇದು ವಾಸ್ತವಾಂಶವಾಗಿದ್ದರೂ ಪರಸ್ಪರ ವಿರೋಧ ಗುಂಪುಗಳ ನಡುವೆ ಇರುವ ವೈಷಮ್ಯವನ್ನು ತೋರ್ಪಡಿಸುತ್ತದೆ.

ಮಂತ್ರಿಮಂಡಲದ ವಿರೋಧಿ ಗುಂಪಿನವರು ನಾಯಕತ್ವದಲ್ಲಿ ಬದಲಾವಣೆ ಆಗುವುದು ಖಂಡಿತವೆಂದೂ, ನಿಜಲಿಂಗಪ್ಪನವರ ಮಂತ್ರಿಮಂಡಲ ಉರುಳುವುದು ಖಂಡಿತವೆಂದೂ ಪೂರ್ಣ ಭರವಸೆಯುಳ್ಳವರಾಗಿದ್ದಾರೆ. ಸಹಿಸಂಗ್ರಹಣ ಕಾರ್ಯಕ್ಕೆ ಮುಟ್ಟುಗೋಲು ಹಾಕಿರುವುದು ಈ ಗುಂಪಿನವರಿಗೆ ನಿರಾಶೆಯುಂಟುಮಾಡಿದೆ.

ಮಂತ್ರಿಮಂಡಲವು ಉರುಳಿ, ನಾಯಕತ್ವದಲ್ಲಿ ಬದಲಾವಣೆಯಾಗದಿದ್ದರೆ ಮೈಸೂರು ಕಾಂಗ್ರೆಸ್‌ನಲ್ಲಿ ಒಡಕುಂಟಾಗುವ ಸಂಭವವಿದೆ ಎಂದು ಬಹಿರಂಗವಾಗಿ ಹೇಳಲಾಗಿದೆ. ಮಾಜಿ ಮೈಸೂರಿನ ಮುಖ್ಯ ಮಂತ್ರಿಗಳು, ವಿರೋಧ ಗುಂಪಿನ ನಾಯಕರಲ್ಲೊಬ್ಬರೂ ಆದ ಕೆಂಗಲ್ ಹನುಮಂತಯ್ಯನವರು ಶ್ರೀರಂಗ ಪಟ್ಟಣದಲ್ಲಿ ಭಾಷಣ ಮಾಡುತ್ತ ಪ್ರಸ್ತುತ ಮಂತ್ರಿಮಂಡಲವನ್ನು ಉರುಳಿಸುವ ವರೆಗೂ ಕಾಂಗ್ರೆಸ್ಸಿನಲ್ಲಿ ಐಕ್ಯತೆ ಮೂಡುವುದಿಲ್ಲ ಎಂದು ಘೋಷಿಸಿದ್ದಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸಾಹುಕಾರ ಚನ್ನಯ್ಯನವರು ಇದನ್ನು ಪುಷ್ಟೀಕರಿಸಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಾರ್ಟಿ ವಿಶೇಷ ಅಧಿವೇಶನ

(ಮೊದಲನೇ ಪುಟದಿಂದ)

ಯನ್ನು ಆರಂಭಿಸಿದೆ. ಚರ್ಚೆಯಲ್ಲಿ ಅನೇಕ ತಿದ್ದುಪಡಿಗಳು ಬಂದಿವೆ. ಇಂಡೊನೇಷಿಯ ಕಮ್ಯೂನಿಸ್ಟ್ ಪಕ್ಷವನ್ನು ಜನತೆಯನ್ನು ಅಭಿನಂದಿಸುವ ನಿರ್ಣಯವನ್ನು ಅಧಿವೇಶನವು ಅಂಗೀಕರಿಸಿತು.

ಪಾರ್ಟಿಯ ಹೊಸ ಘಟನೆ ಮತ್ತು ಹೊಸ ರಾಜಕೀಯ ನಿರ್ಣಯವನ್ನು ಚರ್ಚಿಸಿ ಈ ಅಧಿವೇಶನವು ಅನುಮೋದಿಸುತ್ತದೆ. ಭಾರತ ಕಮ್ಯೂನಿಸ್ಟ್ ಪಕ್ಷದ ಸಂಘಟನೆಯ ಇತಿಹಾಸದಲ್ಲಿ ಈ ಅಧಿವೇಶನ ಬಹಳ ಮುಖ್ಯತ್ವವುಳ್ಳದ್ದಾಗಿದೆ. ಕಮ್ಯೂನಿಸ್ಟ್ ಪಾರ್ಟಿಯು ಮುಂದಿನ ವರ್ಷಗಳಲ್ಲಿ ಸಾಮೂಹಿಕ ಪಕ್ಷವಾಗಿ ಬೆಳೆದು ದೇಶದಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿ ಮುಂದೆ ಬರಲು ಈ ಅಧಿವೇಶನವು ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

ಅಧಿವೇಶನದ ವಿಶೇಷಗಳು

ಏಪ್ರಿಲ್ 6ರಂದು ಸಂಜೆ ಅಮೃತಸರ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯು ಪ್ರತಿನಿಧಿಗಳ ಗೌರವಾರ್ಥವಾಗಿ ಸಾರ್ವಜನಿಕ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದಿತು. ಸಮಾರಂಭದ ಅಧ್ಯಕ್ಷತೆಯನ್ನು ಕಾಂ|| ಸೋಹನ್ ಸಿಂಗ್ ಜೋಷ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ|| ಎಸ್. ಎ. ಡಾಂಗೆ, ಜೋತಿಬಸು, ಜೆಡ್. ಎ. ಅಹಮದ್‌ರವರು ಭಾಷಣ ಮಾಡಿದರು.

ಅಧಿವೇಶನದಲ್ಲಿ ಕೇರಳ ಮುಖ್ಯ ಮಂತ್ರಿ ಕಾಂ|| ಇ. ಎಂ. ಎಸ್. ನಂಬೂದ್ರಿಪಾದ್‌ರವರು, ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಏಕಪಕ್ಷೀಯವಾಗಿ ನಿಲ್ಲಿಸಲು ಸೋವಿಯತ್ ಸರಕಾರದ ತೀರ್ಮಾನವನ್ನು ಸ್ವಾಗತಿಸಿ, ಅಭಿನಂದಿಸುವ ನಿರ್ಣಯವನ್ನು ಮಂಡಿಸಿದರು. ಬ್ರಿಟನ್ ಮತ್ತು ಅಮೆರಿಕಾಗಳು ಸಹ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗ ನಿಲ್ಲಿಸಲು ಒತ್ತಾಯಪಡಿಸುವಂತೆ ಬಲವಾದ ಚಳವಳಿಯನ್ನು ಕಟ್ಟಬೇಕೆಂದು ನಿರ್ಣಯದ ಮೇಲೆ ಮಾತನಾಡುತ್ತಾ ನಂಬೂದ್ರಿಪಾದ್‌ರವರು ತಿಳಿಸಿದರು. ನಿರ್ಣಯವನ್ನು ಅಧಿವೇಶನವು ಕರತಾಡನದಿಂದ ಅಂಗೀಕರಿಸಿತು.

ಅಧಿವೇಶನದ ಕಾಲಾವಧಿಯಲ್ಲಿ ಕೇರಳದಲ್ಲಿ ಅಧಿಕಾರದಲ್ಲಿರುವ ತಮ್ಮ ಅನುಭವಗಳನ್ನು ಕುರಿತು ಕಾಂ|| ಇ. ಎಂ. ಎಸ್. ರವರು ಮಾತನಾಡುವರೆಂದು ತಿಳಿದು ಬಂದಿದೆ. (8—4—58)

(ಕರಡು ರಾಜಕೀಯ ನಿರ್ಣಯ ಮತ್ತು ಕರಡು ಘಟನೆ ಇನ್ನೂ ಅನುಮೋದನೆಯಾಗಿಲ್ಲದ್ದರಿಂದ ಈ ವಾರ ಪ್ರಕಟಿಸಲಾಗುವುದಿಲ್ಲವೆಂದು ತಿಳಿಸಬಯಸುತ್ತೇವೆ. —ಸಂ.)

(ನಮ್ಮ ಪ್ರತಿನಿಧಿಯಿಂದ)

೨,೨೦೦ ಮಂದಿಗೆ ನಿರುದ್ಯೋಗ !

(೮ನೇ ಪುಟದಿಂದ)

ಏಪ್ರಿಲ್ ಒಂದನೇ ತಾರೀಕಿನಂದು ಮಾಲಿಕರು ಕೆಲಸಗಾರರೆಲ್ಲರನ್ನು ಒಳಕ್ಕೆ ಬಿಡದೆ, ಕೇವಲ ೧೦೦ ಮಂದಿಯನ್ನು ಮಾತ್ರ ಬಿಟ್ಟುದನ್ನು ಪ್ರತಿಭಟಿಸಿ ಕೆಲಸಗಾರರು ಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಘರ್ಷಣೆಯಾಗಿ ೧೨ ಮಂದಿ ನೌಕರರಿಗೆ ಘಾಯವಾಗಿದೆ. ನೌಕರರು ಕಾರ್ಖಾನೆಯನ್ನು ಮುಚ್ಚುವುದರ ಬಗ್ಗೆ ತಮ್ಮ ವಿರೋಧವನ್ನೂ ಪ್ರತಿಭಟನೆಯನ್ನೂ ಸೂಚಿಸಿ, ಸರಕಾರವು ಪ್ರವೇಶಿಸಿ, ಕಾರ್ಖಾನೆ ಮುಚ್ಚುವುದನ್ನು ತಡೆಯಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಂಡಿದ್ದಾರೆ.

ಒಂದು ತಿಂಗಳ ಹಿಂದೆಯೇ ಸರಕಾರಕ್ಕೆ ಈ ವಿಷಯ ತಿಳಿದಿದ್ದೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ಸರಕಾರದ ಕಾರ್ಮಿಕ ವಿರೋಧಿ ನೀತಿಯ ಕುರುಹಾಗಿದೆ. ಹುಬ್ಬಳ್ಳಿಯಲ್ಲಿರುವುದು ಈ ಕೈಗಾರಿಕೆ ಒಂದೇ. ಇದನ್ನು ಮುಚ್ಚದಂತೆ ನೋಡಿಕೊಳ್ಳಲೂ ಸಹ ಸರಕಾರ ಮುಂದೆ ಬಾರದಿರುವುದು ಶೋಚನೀಯವಾಗಿದೆ. ಇಂದು ಉದ್ಯೋಗವಿಲ್ಲದೆ ಬೀದಿ ಪಾಲಾಗಿರುವ ೨,೨೦೦ ನೌಕರರ ಹಿತದೃಷ್ಟಿಯಿಂದಲಾದರೂ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದೇ ?

A Selection of New Soviet Publications

POPULAR SCIENCE BOOKS

Title	Author	Rs. nP.
TRAVEL TO DISTANT WORLDS	by Karl Gilzin	2—25
INTERPLANETARY TRAVEL	by A. Sternfeld	0—31
A WORLD WE DO NOT SEE	by Lev Potkov	0—94
FIGURES FOR FUN	by Yakov Perelman	1—19
SEMI CONDUCTORS AND THEIR USE	by A. F. Yofee	0—31
SOIL NUTRITION OF PLANTS	by T. Lysenko	0—62
IN THE WORLDS OF ISOTOPES	by V. Mezentsev	0—25

LITERATURE AND ART

Title	Author	Rs. nP.
UNADDRESSED LETTERS—ART AND SOCIAL LIFE	by G. Plekhanov	1—25
MY UNCLE'S DREAM	by Fyodor Dostoyevsky	2—60
OSTANKINO PALACE — An Explanatory Text		0—56
THE QUEEN OF SPADES	by A. S. Pushkin	0—31
ON THE EVE	by Ivan Turgenev	1—31
THE LAST DAYS OF PUSHKIN — From Unpublished Contemporary letters		0—62

SOVIET LAND AND LIFE

Title	Author	Rs. nP.
U. S. S. R. FACTS AND FIGURES	by M. Struve	0—19
FORTY YEARS OF PUBLIC EDUCATION IN THE U. S. S. R.	by M. Dienko	0—31
MOSCOW — A Short Guide	by A. Kovalyov	1—37
THE LAND OF THE SOVIETS		1—87
PEOPLE'S COURTS IN THE U. S. S. R.	by L. Sheinin	0—37
THE STATUS OF WOMEN IN THE SOVIET UNION	by V. Bilshai	0—31

BOOKS FOR CHILDREN (ILLUSTRATED)

Title	Author	Rs. nP.
THE BLUE MITTEN	by R. Baumvol	0—31
NEW YEARS IN SOKOLNIKI	by A. Kononov (In English and Hindi)	0—19
BISHKA	by K. Ushinsky (Also in Hindi)	0—31
DRAWINGS OF SOVIET CHILDREN	1957—De Luxe Volume	7—81
THE WOLF AND THE LITTLE KIDS — RUSSIAN FOLK TALES	Adapted by Alexie Tolstoy (Also in Hindi)	0—31
WHAT IS GOOD AND WHAT IS BAD	by V. Maykovsky	0—37

(POSTAGE EXTRA)

Available at :

New Century Book House, C. 17, Majestic Circle, Bangalore.
People's Book House, Opp. Jagan Mohan Palace, Mysore.
M/s. Venkataramanayya & Sons, Vidyanidhi Buildings, Mysore.
Prabhath Book House, Mangalore.

MK V/O MEZDUNARODNAYA KNIGA, Moscow 200, U.S.S.R.

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810